# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಸೋಮವಾರ, ಡಿಸೆಂಬರ್ 07, 2020

ಸಂಪುಟ : 47 ಸಂಚಿಕೆ : 217 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com





## ಡಾ.ಅಂಬೇಡ್ಕರ್ ಮಹಾಪರಿನಿರ್ವಾಣ ದಿನಾಚರಣೆ

ದಾವಣಗೆರೆ, ಡಿ.5- ಜಿಲ್ಲಾಡಳಿತದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ 64ನೇ ಮಹಾಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮವನ್ನು ನಗರದ ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಇಂದು ಆಚರಿಸಲಾಯಿತು.

ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹಾಗೂ ಅಧಿಕಾರಿಗಳು, ವಿವಿಧ ಸಮಾಜಗಳ ಮುಖಂಡರು ಡಾ. ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಈ ವೇಳೆ ಜಿಲ್ಲಾಧಿಕಾರಿಗಳು ಮಾತನಾಡಿ, ನಾವೆಲ್ಲ ಒಂದಲ್ಲಾ ಒಂದು ರೀತಿಯಲ್ಲಿ ಅಂಬೇಡ್ಕರ್ ಎಂಬ ಮಹಾನ್ ಚೇತನಕ್ಕೆ ಋಣಿಯಾಗಿದ್ದೇವೆ. ಅಲ್ಲದೇ, ಎಂದಿಗೂ ಋಣಿಯಾಗಿರುತ್ತೇವೆ. ನಾವೆಲ್ಲ ಆ ಚೇತನ ನಡೆದು ಬಂದ ಹಾದಿಯಲ್ಲಿ ನಡೆಯುವ ಪ್ರಯತ್ನ ಮಾಡಬೇಕು ಎಂದು ಆಶಿಸಿದರು.

ಗಣ್ಯರಾದ ಹೆಗ್ಗೆರೆ ರಂಗಪ್ಪ ಅಂಬೇಡ್ಕರ್ ಕುರಿತು ಗಾಯನ ಪ್ರಸ್ತುತ ಪಡಿಸಿದರು. ಈ ವೇಳೆ ಜಿ.ಪಂ ಉಪಾಧ್ಯಕ್ಷರಾದ ಶ್ರೀಮತಿ ಸಾಕಮ್ಮ ಗಂಗಾಧರನಾಯ್ಕ, ಜಿ.ಪಂ. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ಲೋಕೇಶ್ವರ, ಜಿ.ಪಂ. ಮುಖ್ಯ ಕಾರ್ಯನಿರ್ವಹಣಾಧಿಕಾರಿ (2ನೇ ಪುಟಕ್ಕೆ)

> ನಾವೆಲ್ಲ ಒಂದಲ್ಲಾ ಒಂದು ರೀತಿಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಎಂಬ ಮಹಾನ್ ಚೇತನಕ್ಕೆ ಋಣಿಯಾಗಿದ್ದೇವೆ. ಅಲ್ಲದೇ, ಎಂದಿಗೂ ಋಣಿಯಾಗಿರುತ್ತೇವೆ.
>
> - ಮಹಾಂತೇಶ ಬೀಳಗಿ, ಜಿಲ್ಲಾಧಿಕಾರಿ

# ರೈತರ ಬಂದ್‌ಗೆ ವಿಪಕ್ಷಗಳ ಬೆಂಬಲ

## ರೈತರ ಬೇಡಿಕೆ ಈಡೇರಿಸಲು ಕೇಂದ್ರಕ್ಕೆ ಆಗ್ರಹ

ನವದೆಹಲಿ, ಡಿ. 6 - ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು ಕರೆ ನೀಡಿರುವ ಡಿಸೆಂಬರ್ 8ರ ಬಂದ್‌ಗೆ ಕಾಂಗ್ರೆಸ್ ಸೇರಿದಂತೆ ಪ್ರಮುಖ ಪ್ರತಿಪಕ್ಷಗಳು ಬೆಂಬಲ ಘೋಷಿಸಿದ್ದು, ರೈತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿವೆ.

ರೈತರು ಕರೆ ನೀಡಿರುವ ಬಂದ್‌ಗೆ ಬೆಂಬಲಿಸಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಎನ್‌ಸಿಪಿ ನಾಯಕ ಶರದ್ ಪವಾರ್, ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಹಾಗೂ ಪಿಎಜಿಡಿ ಅಧ್ಯಕ್ಷ ಫಾರೂಕ್ ಅಬ್ದುಲ್ಲ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

ಪಂಜಾಬ್ ಹಾಗೂ ಹರಿಯಾಣಗಳ ಮೂಲದವರನ್ನು ಹೆಚ್ಚಾಗಿ ಹೊಂದಿರುವ ರೈತ ಸಂಘಟನೆಗಳು ನವೆಂಬರ್ 26ರಿಂದ ರಾಜಧಾನಿ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಕೇಂದ್ರ ಸರ್ಕಾರ ನೂತನ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಿವೆ. ಈ ಸಂಘಟನೆಗಳು ನಾಳೆ ಮಂಗಳವಾರದಂದು ಭಾರತ ಬಂದ್‌ಗೆ ಕರೆ ನೀಡಿವೆ.

ಭಾರತೀಯ ರೈತರು ಹಲವಾರು ರೈತ ಸಂಘಟನೆಗಳ ಆಶ್ರಯದಲ್ಲಿ ದೇಶಾದ್ಯಂತದಿಂದ ಬಂದು ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಅವರು ಡಿಸೆಂಬರ್ 8ರಂದು ಕರೆ ನೀಡಿರುವ ಭಾರತ್ ಬಂದ್‌ಗೆ ಬೆಂಬಲಿಸುತ್ತೇವೆ. ಮಾರಕವಾಗಿರುವ ಕೃಷಿ ಕಾಯ್ದೆಗಳು ಹಾಗೂ ವಿದ್ಯುತ್ ತಿದ್ದುಪಡಿ ಮಸೂದೆಗಳನ್ನು ವಾಪಸ್ ಪಡೆಯಬೇಕು ಎಂದು ಪ್ರತಿಪಕ್ಷಗಳ ನಾಯಕರು ಆಗ್ರಹಿಸಿದ್ದಾರೆ.

ಆರ್‌ಜೆಡಿಯ ತೇಜಸ್ವಿ ಯಾದವ್, ಸಮಾಜವಾದವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಸಿಪಿಐನ ಡಿ. ರಾಜ, ಸಿಪಿಐ (ಎಂಎಲ್) ನ ದೀಪಂಕರ್ ಭಟ್ಟಾಚಾರ್ಯ, ಎಐಎಫ್‌ಬಿಯ ದೇಬಬ್ರತ ಬಿಸ್ವಾಸ್ ಹಾಗೂ ಆರ್‌ಎಸ್‌ಪಿಯ ಮನೋಜ್ ಭಟ್ಟಾಚಾರ್ಯ ಅವರೂ ಪತ್ರಕ್ಕೆ ಸಹಿ ಹಾಕಿದ್ದಾರೆ.

ನೂತನ ಕೃಷಿ ಕಾಯ್ದೆಗಳನ್ನು ಸಂಸತ್ತಿನಲ್ಲಿ ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ಅಂಗೀಕಾರ ಪಡೆಯಲಾಗಿದೆ. ಇದರಿಂದ ಆಹಾರ ಭದ್ರತೆ, ಭಾರತದ ಕೃಷಿ ಹಾಗೂ ನಮ್ಮ ರೈತರು ನಾಶವಾಗುತ್ತಾರೆ. ಕನಿಷ್ಠ ಬೆಂಬಲ ಬೆಲೆ ನಾಶಗೊಳಿಸುವ ಅಂಶಗಳು ಇದರಲ್ಲಿವೆ ಹಾಗೂ ಭಾರತೀಯ ಕೃಷಿಯನ್ನು ಒತ್ತೆ ಇಡಲಾಗುತ್ತಿದೆ, ನಮ್ಮ ಕೃಷಿ ಮಾರುಕಟ್ಟೆಯನ್ನು ಬಹು ರಾಷ್ಟ್ರೀಯ ಕೃಷಿ ಉದ್ಯಮದ ಕಾರ್ಪೊರೇಟ್‌ಗಳು ಹಾಗೂ ದೇಶೀಯ ಕಾರ್ಪೊರೇಟ್‌ಗಳಿಗೆ ವಹಿಸಲಾಗುತ್ತಿದೆ ಎಂದು ಜಂಟಿ ಹೇಳಿಕೆಯಲ್ಲಿ ಆರೋಪಿಸಲಾಗಿದೆ.

ಕೇಂದ್ರ ಸರ್ಕಾರ ಪ್ರಜಾಸತ್ತಾತ್ಮಕ ಪ್ರಕ್ರಿಯೆಗೆ ಬದ್ಧವಾಗಿರಬೇಕು ಹಾಗೂ ನಮ್ಮ ಅನ್ನದಾತರಾದ ರೈತರ ಕಾನೂನುಬದ್ಧ ಬೇಡಿಕೆಗಳಿಗೆ ಒಪ್ಪಬೇಕು ಎಂದು ಪಕ್ಷಗಳ ನಾಯಕರು (2ನೇ ಪುಟಕ್ಕೆ)

### ಭಾರತ್ ಬಂದ್‌ನಲ್ಲಿ ಭಾಗಿಯಾಗಲು ರೈತ ನಾಯಕರ ಕರೆ

ನವದೆಹಲಿ, ಡಿ. 6 – ಕೇಂದ್ರ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕೆಂದು ಪ್ರತಿಭಟನೆ ನಡೆಸುತ್ತಿರುವ ರೈತ ಮುಖಂಡರು, ಡಿ.8ರಂದು ಕರೆ ನೀಡಲಾಗಿರುವ ಭಾರತ್ ಬಂದ್‌ನಲ್ಲಿ ಜನರು ಗರಿಷ್ಠ ಪ್ರಮಾಣದಲ್ಲಿ ಭಾಗಿಯಾಗಬೇಕೆಂದು ಕರೆ ನೀಡಿದ್ದಾರೆ. ಹಲವಾರು ರಾಜಕೀಯ ಪಕ್ಷಗಳು ಬಂದ್‌ಗೆ ಬೆಂಬಲ ನೀಡಿರುವುದನ್ನು ಸ್ವಾಗತಿಸಿರುವ ಪ್ರತಿಭಟನಾ ನಿರತ ರೈತ ಮುಖಂಡರು, ಇತರರೂ ಸಹ ಮುಂದೆ ಬಂದು ಮಂಗಳವಾರದ ಬಂದ್‌ಗೆ ಬೆಂಬಲಿಸಬೇಕೆಂದು ಕರೆ ನೀಡಿದ್ದಾರೆ. ಈ ಪ್ರತಿಭಟನೆ ಕೇವಲ ಪಂಜಾಬ್ ರೈತರದ್ದಲ್ಲ. ಇದು ಇಡೀ ದೇಶದ ಪ್ರತಿಭಟನೆ. ನಾವು ನಮ್ಮ ಪ್ರತಿಭಟನೆಯನ್ನು ಬಲಗೊಳಿಸಲಿದ್ದೇವೆ. ಪ್ರತಿಭಟನೆ ಈಗಾಗಲೇ ದೇಶಾದ್ಯಂತ ಹರಡಿದೆ. ಸರ್ಕಾರ ನಮ್ಮ ಜೊತೆ ಸೂಕ್ತವಾಗಿ ವ್ಯವಹರಿಸದ ಕಾರಣ (3ನೇ ಪುಟಕ್ಕೆ)

## ಈ ವರ್ಷ 2 ದಿನ ಸರಳ 'ಹರ ಜಾತ್ರೆ'



> ನಾಡಿನ ಪ್ರಮುಖ ಸಾಹಿತಿ, ಅನುಭಾವಿತರೊಂದಿಗೆ ಆತ್ಮನಿರ್ಭರ ಭಾರತಕ್ಕಾಗಿ ಕೃಷಿ-ಋಷಿ ಸಮಾವೇಶ, ಯುವ ಸಮಾವೇಶದ ಮೂಲಕ ಚಿಂತನ ಮಂಥನ ಕಾರ್ಯಕ್ರಮ ನಡೆಸಲಾಗುವುದು.
>
> - ವಚನಾನಂದ ಶ್ರೀ

ಹರಿಹರ, ಡಿ. 6- ಬರುವ ಜನವರಿ 14 ಹಾಗೂ 15ರಂದು ಎರಡು ದಿನಗಳ ಕಾಲ ವರ್ಚುವಲ್ ಹರಜಾತ್ರೆಯನ್ನು ಸರಳವಾಗಿ ಆಚರಿಸಲಾಗುವುದು ಎಂದು ಹರಿಹರ ಪಂಚಮಸಾಲಿ ಜಗದ್ಗುರು ಪೀಠದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮೀಜಿ ತಿಳಿಸಿದರು.

ಹರಿಹರದ ಪಂಚಮಸಾಲಿ ಪೀಠದಲ್ಲಿ ಹರಜಾತ್ರೆಯ ನಿಮಿತ್ತ ಭಾನುವಾರ ನಡೆದ ಪೂರ್ವಭಾವಿ ಸಭೆಯ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಕೊವಿಡ್ ಹಿನ್ನೆಲೆಯಲ್ಲಿ ಯಾವುದೇ ಸನ್ಮಾನ, ಗೌರವ ಸಮಾರಂಭ ಇರುವುದಿಲ್ಲ. ಬದಲಾಗಿ ಈ ಎರಡೂ ದಿನಗಳಂದು ನಾಡಿನ ಪ್ರಮುಖ ಸಾಹಿತಿ, ಅನುಭಾವಿತರೊಂದಿಗೆ ಆತ್ಮನಿರ್ಭರ್ ಭಾರತಕ್ಕಾಗಿ ಕೃಷಿ-ಋಷಿ ಸಮಾವೇಶ, ಯುವ ಸಮಾವೇಶ ಮೂಲಕ ಚಿಂತನ ಮಂಥನ ಮಾಡುವುದು ಹಾಗೂ ಪೀಠಾರೋಹಣದಂತಹ ಕಾರ್ಯಕ್ರಮಗಳನ್ನು ಆಯೋಜಿಸುವುದು ಎಂದು ತಿಳಿಸಿದರು.

ಇತಿಹಾಸ ಕೆದಕುವ ಬದಲು, ಪುರಾಣ ಮಾಡದೆ ಪ್ರಸ್ತುತ ಸಮಾಜಕ್ಕೆ ಅನುಕೂಲವಾಗುವಂತಹ ಯೋಜನೆಗಳನ್ನು ಮಾಡಬೇಕು. ಜಾತ್ರೆ ಯಶಸ್ವಿಗೆ ಎಲ್ಲರು ಭಾಗವಹಿಸಿ ತಮ್ಮ ತನು, ಮನ, ಧನ ಸಹಾಯ ಸಹಕಾರವಿರಲಿ ಎಂದು ಹೇಳಿದರು.

ಧರ್ಮದರ್ಶಿ ಚಂದ್ರಶೇಖರ ಪೂಜಾರ್ ಮಾತನಾಡಿ, ಕೊರೊನಾದಿಂದಾಗಿ ವ್ಯಾಪಾರ ವ್ಯವಹಾರ ಇಲ್ಲದೆ ಸಾಕಷ್ಟು ಆರ್ಥಿಕ ಸಂಕಷ್ಟ ಎದುರಾಗಿದೆ. ಆದ್ದರಿಂದ ಶ್ರೀಗಳ ಸಮ್ಮುಖದಲ್ಲಿ ಸರಳವಾಗಿ ಜಾತ್ರೆ ಆಚರಿಸೋಣ. 2ಎ ಮತ್ತು ಒಬಿಸಿ ಸೌಲಭ್ಯಗಳ ಬಗ್ಗೆ ಹಕ್ಕೊತ್ತಾಯ ಮಂಡಿಸಿ, ಸರ್ಕಾರದ ಮಟ್ಟದಲ್ಲಿ ಗಮನ ಸೆಳೆಯುವ ಪ್ರಯತ್ನ ಮಾಡಲಾಗುವುದು ಎಂದರು.

ಸಮಾಜದ ಪ್ರಧಾನ ಧರ್ಮದರ್ಶಿ ಬಿ.ಸಿ.ಉಮಾಪತಿ ಮಾತನಾಡಿ, ಇದು ಕೇವಲ ಧಾರ್ಮಿಕ ಕಾರ್ಯಕ್ರಮವಲ್ಲ, ಸಂಘಟನೆ ಮತ್ತು ಶಕ್ತಿ ಪ್ರದರ್ಶನಕ್ಕೆ ಹರ ಜಾತ್ರೆ ನೆರವಾಗಲಿದೆ. ಸಮಾಜ ಇಷ್ಟೊಂದು ದೊಡ್ಡದಾಗಿರುವ ಬಗ್ಗೆ ಗೊತ್ತಾಗಿದ್ದು ಹರಜಾತ್ರೆಯಿಂದ ಎಂದರು.

ಈ ಬಾರಿ ಸಂಕಷ್ಟ ಎದುರಾಗಿದ್ದು, ಇದರ ನಡುವೆಯು ಎಲ್ಲಾ ಕಾರ್ಯಕ್ರಮಗಳ ಕುರಿತು ಪೂರ್ವಭಾವಿ ಸಭೆಯ ಮೂಲಕ ಸಂಕ್ರಾಂತಿ, ಹರ ಜಾತ್ರೆ ಮಾಡಬೇಕಾಗಿದೆ. ಯುವಕರಿಗೆ, ಸಮಾಜದವರಿಗೆ ಯಾವ ರೀತಿ ಬದುಕಬೇಕು, ಸರ್ಕಾರದ ಸೌಲಭ್ಯ ಹೇಗೆ ಪಡೆಯಬೇಕು ಎಂಬುದನ್ನು ತಿಳಿಸಬೇಕಿದೆ. ಜಾತ್ರೆ ಸರಳವಾಗಿ ನಡೆಯಲಿದೆ. ನಮ್ಮಲ್ಲಿರುವ ವೈಮನಸ್ಸುಗಳನ್ನು ಬಿಟ್ಟು ಸಂಘಟಿತರಾಗಿ ಕೆಲಸ ಮಾಡೋಣ ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಹರ ಜಾತ್ರಾ ಮಹೋತ್ಸವದ ಸಮಿತಿಯ ಅಧ್ಯಕ್ಷರನ್ನಾಗಿ ಬಿ. ಲೋಕೇಶ್, (2ನೇ ಪುಟಕ್ಕೆ)

# ಅಭಿವೃದ್ಧಿ ಮಾಡಲಾಗದ ಶಾಸಕರಿಂದ ಹೊಸ ರಾಗ

## ಗ್ರಾ.ಪಂ. ಚುನಾವಣೆ ಪೂರ್ವಭಾವಿ ಸಭೆಯಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್

ಹರಿಹರ, ಡಿ.6- ಹಿಂದೆ ಬಿಜೆಪಿ ಸರ್ಕಾರದ ಸಮಯದಲ್ಲಿ ಹರಿಹರ ಕ್ಷೇತ್ರಕ್ಕೆ ಅನುದಾನ ಸಾಗರ ರೂಪದಲ್ಲಿ ಹರಿದುಬಂದ ಪರಿಣಾಮವಾಗಿ ಮಿನಿ ವಿಧಾನಸೌಧ, ಸೇತುವೆ, ಸ್ವಿಮ್ಮಿಂಗ್ ಪೂಲ್, ನ್ಯಾಯಾಲಯ ಸಂಕೀರ್ಣ, ಗ್ರಾಮೀಣ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆ, ಮನೆಗಳ ನಿರ್ಮಾಣ ಸೇರಿದಂತೆ ಹಲವಾರು ಅಭಿವೃದ್ಧಿ ಕೆಲಸವನ್ನು ಮಾಡಲಾಯಿತು. ಆದರೆ ಈಗಿನ ಶಾಸಕ ಡಾ. ಎಸ್. ರಾಮಪ್ಪ ಅಭಿವೃದ್ಧಿ ಮಾಡಲಿಕ್ಕೆ ಆಗದೇ ಇರುವುದರಿಂದ ನನ್ನ ಮೇಲೆ ಇಲ್ಲದ ವಿಚಾರಗಳನ್ನು ಹೇಳುತ್ತಾ ಹೊಸ ರಾಗವನ್ನು ಹಾಡುತ್ತಿದ್ದಾರೆ ಎಂದು ಮಾಜಿ ಶಾಸಕ ಬಿ.ಪಿ. ಹರೀಶ್ ಹೇಳಿದರು.



ನಗರದ ರಾಘವೇಂದ್ರಸ್ವಾಮಿ ಮಠದ ಸಭಾಂಗಣದಲ್ಲಿ ಇಂದು ನಡೆದ ಗ್ರಾಮ ಪಂಚಾಯತಿ ಚುನಾವಣೆಯ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಡಾ. ರಾಮಪ್ಪನವರ ಗ್ರಹಚಾರ ಸರಿ ಇಲ್ಲದೇ ಇರುವುದರಿಂದ ವಿಶ್ವದಾದ್ಯಂತ ಕೊರೊನಾ ರೋಗ ಬಂದು ಸರ್ಕಾರ ಎಲ್ಲಾ ಹಣವನ್ನು ಅದನ್ನು ತಹಬಂದಿಗೆ ತರುವುದಕ್ಕೆ ಆರೋಗ್ಯ ಇಲಾಖೆಗೆ ವ್ಯಯ ಮಾಡಿದ ಪರಿಣಾಮವಾಗಿ ಅಭಿವೃದ್ಧಿ ಕುಂಠಿತವಾಯಿತು. ಅದನ್ನು ಬಿಟ್ಟು ನಮ್ಮ ಮೇಲೆ ಆರೋಪವನ್ನು ಮಾಡುತ್ತಾರೆ. ಇವರಿಗೆ ಸ್ವಯಂ ಬುದ್ದಿವಂತಿಕೆ ಇಲ್ಲ ಮತ್ತು ಇನ್ನೊಬ್ಬರು ಹೇಳಿದಂಗೆ ಸಹ ಮಾಡುವುದಕ್ಕೂ ಆಗೋಲ್ಲ, ಸಂಸದರು ಕ್ಷೇತ್ರದ ಅಭಿವೃದ್ಧಿ ವಿಚಾರಕ್ಕೆ ಇವರನ್ನು ಬೆಂಗಳೂರಿಗೆ ಅನೇಕ ಸಾರಿ ಕರೆದರೂ ಸಹ ಹೋಗಿರುವುದಿಲ್ಲ. ಕಾರಣ ಅಭಿವೃದ್ಧಿ ಆದರೆ, ಬಿಜೆಪಿ ಪಕ್ಷಕ್ಕೆ ಹೆಸರು ಬರುತ್ತದೆ ಎಂಬ ಭಾವನೆಯಿಂದ ಮತ್ತು ಇದುವರೆಗೆ ಎಂ.ಪಿ.ರವರನ್ನು ಒಂದು ಸಾರಿಯೂ ಸಂಪರ್ಕ ಮಾಡಲಿಕ್ಕೆ ಹೋಗಿಲ್ಲ. ತಾವು ಶಾಸಕರಾಗಿ ಇಷ್ಟು ವರ್ಷಗಳಲ್ಲಿ ಏನು ಸಾಧನೆ ಮಾಡಿದ್ದೀರಾ, ಕ್ಷೇತ್ರ ಅಭಿವೃದ್ಧಿಗೆ ಎಷ್ಟು ಶ್ರಮವಹಿಸಿ ಕೆಲಸವನ್ನು ಮಾಡಿದ್ದೀರಾ? ತಮ್ಮಲ್ಲೇ ನ್ಯೂನತೆಗಳನ್ನು ಇಟ್ಟುಕೊಂಡು ಇನ್ನೊಬ್ಬರ ಮೇಲೆ ಆರೋಪವನ್ನು ಮಾಡುವುದನ್ನು ನಿಲ್ಲಿಸುವಂತೆ ಹೇಳಿದರು.

ಜಿಲ್ಲಾ ಬಿಜೆಪಿ (2ನೇ ಪುಟಕ್ಕೆ)

## ಮನೆ ಬಾಗಿಲಿಗೆ ಪಾಲಿಕೆ ನಿಷ್ಪ್ರಯೋಜಕ



ವಿಪಕ್ಷ ನಾಯಕ ಎ.ನಾಗರಾಜ್ ಆರೋಪ

ದಾವಣಗೆರೆ, ಡಿ.6- ಮಹಾನಗರ ಪಾಲಿಕೆಯಿಂದ ನಡೆಸುತ್ತಿರುವ ಮನೆ ಬಾಗಿಲಿಗೆ ಮಹಾನಗರ ಪಾಲಿಕೆ ನಿಷ್ಪ್ರಯೋಜಕ ಕಾರ್ಯಕ್ರಮವಾಗಿದೆ ಎಂದು ಪಾಲಿಕೆ ವಿಪಕ್ಷ ನಾಯಕ ಎ. ನಾಗರಾಜ್ ಆರೋಪಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಮೇಯರ್ ಹಾಗೂ ಸದಸ್ಯರು, ಅಧಿಕಾರಿಗಳು ಭೇಟಿ ಮಾಡುವ ವೇಳೆ ಪ್ರತಿ ವಾರ್ಡ್‌ನಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಹೇಳಿದ್ದೆವು. ಆದರೆ ಯಾವ ಅಭಿವೃದ್ಧಿಯೂ ನಡೆಯುತ್ತಿಲ್ಲ ಎಂದರು.

ಮುಖ್ಯಮಂತ್ರಿಗಳಿಂದ ಅನುದಾನ ತರುತ್ತೇವೆ. ಸಾಧ್ಯವಾಗದಿದ್ದರೆ ಪಾಲಿಕೆ ಆದಾಯದಲ್ಲಿನ ಹಣದಲ್ಲಿ ಪ್ರತಿ ವಾರ್ಡ್‌ಗೆ 40 ಲಕ್ಷ ರೂ.ಗಳ ಅನುದಾನ ನೀಡುವುದಾಗಿ ಮೇಯರ್ ಹೇಳಿದ್ದರು. ಆದರೆ ಯಾವ ಅನುದಾನವನ್ನೂ ನೀಡಿಲ್ಲ.

ಕಟ್ಟಡ ಪರವಾನಗಿ, ಟ್ರೇಡ್ ಲೈಸೆನ್ಸ್, ಖಾತೆ ಬದಲಾವಣೆ ಕಾರ್ಯಗಳು ಆನ್‌ಲೈನ್ ಆಗಿವೆ. ಅಲ್ಲದೆ ಸರ್ವರ್ ಸಮಸ್ಯೆಯನ್ನೂ ಪಾಲಿಕೆ ಎದುರಿಸುತ್ತಿದೆ. ಕೇವಲ 20 ರಿಂದ 30 ಸಾವಿರ ರೂ. ಕಂದಾಯ ವಸೂಲಿ ಮಾಡಲು ಅಷ್ಟೊಂದು ಖರ್ಚು ಮಾಡಿ ಕಾರ್ಯಕ್ರಮ ನಡೆಸುವ ಅಗತ್ಯವಿಲ್ಲ. ಮುಂದಿನ ದಿನಗಳಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ವಾರ್ಡುಗಳಿಗೆ ಭೇಟಿ ನೀಡಲಿ. ಇಲ್ಲದಿದ್ದರೆ ಕಾಂಗ್ರೆಸ್ ವಾರ್ಡುಗಳಿಗೆ ಬಹಿಷ್ಕಾರ ಹಾಕುತ್ತೇವೆ ಎಂದರು.

ಮನೆ ಮನೆ ಬಾಗಿಲಿಗೆ ಕಾರ್ಯಕ್ರಮಕ್ಕೆ ಪಾಲಿಕೆಯ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳು ಭಾಗವಹಿಸುವುದರಿಂದ ಪಾಲಿಕೆಯಲ್ಲಿ ಯಾರೂ (2ನೇ ಪುಟಕ್ಕೆ)

## 2ಎ ಮೀಸಲಾತಿಗಾಗಿ 23ರಿಂದ ಪಾದಯಾತ್ರೆ

### 8ಕ್ಕೆ ಪಂಚಮಸಾಲಿ ಪೂರ್ವಭಾವಿ ಸಭೆ



ದಾವಣಗೆರೆ, ಡಿ.6- ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಹಾಗೂ ಕೇಂದ್ರದ ಒಬಿಸಿ ಪಟ್ಟಿಯಲ್ಲಿ ಸೇರ್ಪಡೆ ಮಾಡುವಂತೆ ಒತ್ತಾಯಿಸಿ, ಇದೇ 23 ರಿಂದ ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಕೂಡಲ ಸಂಗಮದಿಂದ ಬೆಂಗಳೂರು ವಿಧಾನ ಸೌಧ ದವರೆಗೆ ಪಂಚ ಲಕ್ಷ ಹೆಜ್ಜೆಗಳೊಂದಿಗೆ ಬೃಹತ್ ಪಾದಯಾತ್ರೆ ಮಾಡಲು ತೀರ್ಮಾನಿಸಲಾಗಿದೆ ಎಂದು (3ನೇ ಪುಟಕ್ಕೆ)

# ಹರಿಹರ ನಗರಸಭೆ ಕೆಲಸ ಲಾಕ್ ಮಾಡಿದ ಎಲೆಕ್ಟ್ರಾನಿಕ್ ಕೀ

ಹರಿಹರ, ಡಿ.6- ನಗರಸಭೆಗೆ ನೂತನ ಪೌರಾಯುಕ್ತರು ಬಂದಿದ್ದು, ಅವರ ಹೆಸರಿನಲ್ಲಿ ಎಲೆಕ್ಟ್ರಾನಿಕ್ ಕೀ ಸಿದ್ಧಗೊಳ್ಳದ್ದರಿಂದ ದಾಖಲೆಗಳನ್ನು ಪಡೆಯಲು ಸಾರ್ವಜನಿಕರು ಪರದಾಡುವಂತಾಗಿದೆ.

ವರ್ಗಾವಣೆಯಾಗಿ ಹೊಸ ಪೌರಾಯುಕ್ತರು ಆಗಮಿಸಿದರೆ ಅವರ ಹೆಸರಿನಲ್ಲಿ ಎಲೆಕ್ಟ್ರಾನಿಕ್ ಕೀ ಸೃಷ್ಟಿಸಲಾಗುತ್ತದೆ. ಹೊಸ ಪೌರಾಯುಕ್ತರು ಆಗಮಿಸಿ ಒಂದು ವಾರವಾದರೂ ಇನ್ನೂ ಆ ಕೀ ಸಿದ್ಧಗೊಳ್ಳಲಿಲ್ಲ. ಪರಿಣಾಮವಾಗಿ ಆಸ್ತಿಗಳ ಖಾತಾ ಎಕ್ಸ್‌ಟ್ರ್ಯಾಕ್ಟ್, ಟ್ರೇಡ್ ಲೈಸೆನ್ಸ್ ಸಾರ್ವಜನಿಕರಿಗೆ ಕನ್ನಡಿಯ ಗಂಟಾಗಿ ಪರಿಣಮಿಸಿದೆ.

ಯಾವುದಾದರು ಆಸ್ತಿ, ಪಾಸ್ತಿಗಳ ಮಾರಾಟ, ಖರೀದಿ, ಬ್ಯಾಂಕುಗಳಲ್ಲಿ ಸಾಲ ಪಡೆಯಲು ಸೇರಿದಂತೆ ಹತ್ತಾರು ಕೆಲಸ ಕಾರ್ಯಗಳಿಗೆ ಮನೆ, ಕಟ್ಟಡ, ನಿವೇಶನಗಳ ಖಾತಾ ಎಕ್ಸ್‌ಟ್ರ್ಯಾಕ್ಟ್ ಅಗತ್ಯವಾಗುತ್ತದೆ. ಈ ಮುಂಚೆ ಕೈಯಿಂದ ಬರೆದುಕೊಡುವ ಪದ್ಧತಿಯಿದ್ದಾಗ ಕಂದಾಯ



ಅಧಿಕಾರಿಯ ಸಹಿ ಸಾಕಾಗುತ್ತಿತ್ತು. ಆದರೀಗ ಕಂಪ್ಯೂಟರೀಕರಣವಾದ ನಂತರ ಪ್ರತಿ ಖಾತಾ ಎಕ್ಸ್‌ಟ್ರ್ಯಾಕ್ಟ್‌ಗೂ ಪೌರಾಯುಕ್ತರ ಡಿಜಿಟಲ್ ಸಹಿ ಬೇಕಾಗಿದೆ.

ಎರಡನೆಯದಾಗಿ ವಿವಿಧ ಉದ್ದಿಮೆ, ವ್ಯಾಪಾರ, ವಹಿವಾಟು ಮಾಡುವವರಿಗೆ ಟ್ರೇಡ್ ಲೈಸೆನ್ಸ್ ಅಗತ್ಯವಾಗುತ್ತದೆ. ಆ ಟ್ರೇಡ್ ಲೈಸೆನ್ಸ್ ಉದ್ದಿಮೆಗಳಿಗೆ ವಿದ್ಯುತ್ ಸಂಪರ್ಕ, ಜಿಎಸ್‌ಟಿ, ಸಿಎಸ್‌ಟಿ ಇತರೆ ತೆರಿಗೆ ಕೆಲಸ, ಕಾರ್ಯಗಳಿಗೆ ಅಗತ್ಯವಾಗಿದೆ.

ಸಾಮಾನ್ಯವಾಗಿ ಇಂತಹ ಒಬ್ಬ ಅಧಿಕಾರಿ ವರ್ಗಾವಣೆಯಾದಾಗ ಹೋಗುವ ಅಧಿಕಾರಿ ಬಂದಿರುವ ಅಧಿಕಾರಿಗೆ ಹೊಸ ಕೀ ಸೃಜಿಸಲು ಅಗತ್ಯ ಸಹಕಾರ ನೀಡುತ್ತಾರೆ. ಆದರೆ ಇಲ್ಲಿದ್ದ ಪೌರಾಯುಕ್ತರು ತಮ್ಮ ವರ್ಗಾವಣೆ ಅಸಿಂಧು ಎಂದು ಕಾನೂನು ಹೋರಾಟಕ್ಕೆ ಮುಂದಾಗಿದ್ದಾರೆ.

ಇಲ್ಲಿಗೆ ಬಂದಿರುವ ಪೌರಾಯುಕ್ತರು ಆ ಹುದ್ದೆಗೇರಲು ಸಮರ್ಥರಲ್ಲ, ಹೀಗಾಗಿ ಇದನ್ನು ಕೆಲವರು ಪ್ರಶ್ನೆ ಮಾಡಿದ್ದಾರೆನ್ನುವುದು ಹಾಗೂ ಹಿಂದಿನ ಪೌರಾಯುಕ್ತರ ವರ್ಗಾವಣೆ ಪ್ರಿ ಮೆಚ್ಯೂರ್ ಎಂಬುದು ವಿವಾದದ ಕೇಂದ್ರ ಬಿಂದುವಾಗಿದೆ. ಒಟ್ಟಾರೆ ಈ ಪ್ರಕರಣವು ಗಂಡ, ಹೆಂಡತಿಯ ಜಗಳದಲ್ಲಿ ಕೂಸು ಬಡವಾಯಿತೆಂಬಂತೆ ಈ ಇಬ್ಬರು ಪೌರಾಯುಕ್ತರ ಜಗಳದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ.

> ವರ್ಗಾವಣೆ ಮಾಡುವ ಮುನ್ನ ಸಂಬಂಧಿತ ಇಲಾಖೆಯವರು ಸೂಕ್ತ ನಿಯಮಾವಳಿ ಪಾಲನೆ ಮಾಡಬೇಕು. ಅದರ ಹೊರತಾಗಿ ವರ್ಗಾವಣೆ ಸಿಂಧು ಹೌದೋ, ಅಲ್ಲವೋ ಎಂಬುದು ಎರಡನೇ ಪ್ರಶ್ನೆ, ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಈ ಕುರಿತು ಹಿರಿಯ ಅಧಿಕಾರಿಗಳು ಮಧ್ಯ ಪ್ರವೇಶಿಸಿ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗೆ ಪರಿಹಾರ ಒದಗಿಸಬೇಕು.
>
> - ನಾಗರಾಜ್ ಮೆಹರ್ವಾಡೆ, ಕರವೇ ಜಿಲ್ಲಾ ಉಪಾಧ್ಯಕ್ಷರು

## ಆಂಧ್ರದಲ್ಲಿ ನಿಗೂಢ ರೋಗ

ಅಮರಾವತಿ, ಡಿ. 6 – ಆಂಧ್ರ ಪ್ರದೇಶದ ಎಲೂರಿನಲ್ಲಿ ನಿಗೂಢ ರೋಗ ಕಾಣಿಸಿಕೊಂಡಿದ್ದು, ಇದರಿಂದಾಗಿ ಒಬ್ಬರು ಸಾವನ್ನಪ್ಪಿದ್ದರೆ 292 ಜನರು ಅಸ್ವಸ್ಥರಾಗಿದ್ದಾರೆ.

> ಓರ್ವನ ಸಾವು, 292 ಜನ ಅಸ್ವಸ್ಥ

140 ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ವಾಪಸ್ಸಾಗಿದ್ದಾರೆ. ಉಳಿದವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ ಎಂದು ಪಶ್ಚಿಮ ಗೋದಾವರಿ ಜಿಲ್ಲೆಯ ಆರೋಗ್ಯಾಧಿಕಾರಿಗಳು ತಿಳಿಸಿದ್ದಾರೆ.

ಜನರು ಹಠಾತ್ತನೆ ಫಿಟ್ಸ್‌ಗೆ ಗುರಿಯಾಗುತ್ತಿದ್ದಾರೆ (2ನೇ ಪುಟಕ್ಕೆ)

## ಅಪೆಕ್ಸ್ ಬ್ಯಾಂಕ್ ಚುನಾವಣೆ ಸ್ಪರ್ಧೆಗೆ ಜಗದೀಶಪ್ಪ ಬಣಕಾರ್ ಆಯ್ಕೆ



ದಾವಣಗೆರೆ,ಡಿ.6- ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಪ್ರತಿನಿಧಿಯಾಗಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಗೆ ಸ್ಪರ್ಧಿಸಲು ಡಿಡಿಸಿಸಿ ಬ್ಯಾಂಕ್ ನಿರ್ದೇಶಕ ಜಗದೀಶಪ್ಪ ಬಣಕಾರ್ ಅವರಿಗೆ ಅವಕಾಶ (3ನೇ ಪುಟಕ್ಕೆ)




# ರೈತರ ಬಂದ್ : ದೇಶಾದ್ಯಂತ ನಾಳೆ ಕಾಂಗ್ರೆಸ್ ಪ್ರತಿಭಟನೆ

ನವದೆಹಲಿ, ಡಿ. 6 - ದೆಹಲಿಯಲ್ಲಿ ಪ್ರತಿಭಟನಾ ನಿರತ ರೈತ ಸಂಘಟನೆಗಳು ಕರೆ ನೀಡಿರುವ ಮಂಗಳವಾರದ ಭಾರತ್ ಬಂದ್‌ಗೆ ಬೆಂಬಲ ವ್ಯಕ್ತಪಡಿಸಿರುವ ಕಾಂಗ್ರೆಸ್, ಅಂದು ದೇಶಾದ್ಯಂತ ಎಲ್ಲಾ ಜಿಲ್ಲಾ ಕೇಂದ್ರಗಳು ಹಾಗೂ ರಾಜ್ಯಗಳ ರಾಜಧಾನಿಗಳಲ್ಲಿ ಪ್ರತಿಭಟನೆ ನಡೆಸುವುದಾಗಿ ಹೇಳಿದೆ.

ಎಐಸಿಸಿ ಕೇಂದ್ರ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿರುವ ಪಕ್ಷದ ವಕ್ತಾರ ಪವನ್ ಖೇರಾ, ಪಕ್ಷವು ಡಿಸೆಂಬರ್ 8ರ ಬಂದ್‌ಗೆ ಸಂಪೂರ್ಣ ಬೆಂಬಲಿಸಲಿದೆ ಎಂದಿದ್ದಾರೆ.

ಕಾಂಗ್ರೆಸ್ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರು ಈ ಹಿಂದೆ ಟ್ರ್ಯಾಕ್ಟರ್ ಸಮಾವೇಶಗಳು, ಸಹಿ ಅಭಿಯಾನ ಹಾಗೂ ಕಿಸಾನ್ ಸಮ್ಮೇಳನಗಳ ಮೂಲಕ ರೈತರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.


ಬಂದ್‌ಗೆ ಕರೆ ನೀಡಿರುವ ದಿನದಂದು ಎಲ್ಲಾ ಜಿಲ್ಲೆಗಳು ಹಾಗೂ ರಾಜ್ಯಗಳ ಕೇಂದ್ರ ಸ್ಥಾನಗಳಲ್ಲಿ ಪ್ರತಿಭಟನೆಗಳನ್ನು ನಡೆಸುವ ಮೂಲಕ ಬಂದ್ ಯಶಸ್ವಿಗೊಳಿಸಲಾಗುವುದು ಎಂದವರು ಹೇಳಿದ್ದಾರೆ.

**ಪ್ರತಿಭಟನಾ ನಿರತ ರೈತ ಸಂಘಟನೆಗಳು ಕರೆ ನೀಡಿರುವ ಮಂಗಳವಾರದ ಭಾರತ್ ಬಂದ್‌ಗೆ ಬೆಂಬಲ**

ಪ್ರತ್ಯೇಕ ಹೇಳಿಕೆ ಬಿಡುಗಡೆ ಮಾಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಸರ್ಕಾರದ ದೌರ್ಜನ್ಯ ಹಾಗೂ ದೆಹಲಿಯ ಕಡು ಚಳಿ ಪರಿಸ್ಥಿತಿಯ ನಡುವೆಯೂ ಜನ ವಿರೋಧಿ ಶಾಸನಗಳ ವಿರುದ್ಧ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಅವರ ಬದ್ಧತೆ ಹಾಗೂ ಐತಿಹಾಸಿಕ ಹೋರಾಟಕ್ಕೆ ಪಕ್ಷ ಬೆಂಬಲವಾಗಿ ನಿಲ್ಲಲಿದೆ ಎಂದಿದ್ದಾರೆ.

ಮೂರು ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯುವುದಿಲ್ಲ. ಅಗತ್ಯವಾದಲ್ಲಿ ತಿದ್ದುಪಡಿ ತರಲಾಗುವುದು ಎಂದು ಕೇಂದ್ರ ಕೃಷಿ ಖಾತೆ ಅಧೀನ ಸಚಿವ ಕೈಲಾಶ್ ಚೌಧರಿ ಹೇಳಿರುವುದನ್ನು ತಳ್ಳಿ ಹಾಕಿರುವ ಕಾಂಗ್ರೆಸ್ ಪ್ರಧಾನ ವಕ್ತಾರ ರಣದೀಪ್ ಸುರ್ಜೇವಾಲಾ, ಇದನ್ನು ರೈತರು ಒಪ್ಪುತ್ತಿಲ್ಲ. ಹೀಗಿರುವಾಗ ಮೋದಿ ಸರ್ಕಾರ ಏಕೆ ದೇಶದ ಜನರನ್ನು ಮೂರ್ಖರನ್ನಾಗಿ ಮಾಡುತ್ತಿದೆ? ಎಂದು ಪ್ರಶ್ನಿಸಿದ್ದಾರೆ.

## ಕರ್ನಾಟಕ ಜನಶಕ್ತಿಯಿಂದ ಅಂಬೇಡ್ಕರ್ ಸ್ಮರಣೆ




ದಾವಣಗೆರೆ, ಡಿ.6- ಬಾಬಾ ಸಾಹೇಬ್ ಡಾ. ಭೀಮ್ ರಾವ್ ಅಂಬೇಡ್ಕರ್ ಅವರ 64ನೇ ಪರಿನಿಬ್ಬಾಣ ದಿನಾಚರಣೆಯನ್ನು ನಗರದಲ್ಲಿ ಇಂದು ಕರ್ನಾಟಕ ಜನಶಕ್ತಿ ಜಿಲ್ಲಾ ಸಮಿತಿ ವತಿಯಿಂದ ಆಚರಿಸಲಾಯಿತು.


ಅಂಬೇಡ್ಕರ್ ವೃತ್ತದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ, ಅವರ ಸಾಧನೆ- ಜನಸ್ನೇಹಿ ಕಾರ್ಯಗಳನ್ನು ಸ್ಮರಿಸಲಾಯಿತು.

ಸಮಿತಿಯ ಸತೀಶ್ ಅರವಿಂದ್ ಮಾತನಾಡಿ, ಶೋಷಣೆ ವಿಮೋಚನೆಗಾಗಿ ಹಲವಾರು ಮಹನೀಯರು ಹೋರಾಡಿದ್ದಾರೆ. ಅದರಲ್ಲಿ ಮುಖ್ಯವಾಗಿ ನಾವು ಇಂದು ನೆನಪಿಸಿಕೊಳ್ಳಬೇಕಿರುವ ಮಹಾನ್ ವ್ಯಕ್ತಿ ಅಂಬೇಡ್ಕರ್ ಎಂದು ತಿಳಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಸಮಾಜದಲ್ಲಿರುವ ಜಾತಿ ಶೋಷಣೆ, ಅಸಮಾನತೆ, ಮೇಲು ಕೀಲುಗಳನ್ನು ಸ್ವತಃ ಅನುಭವಿಸಿರುವ ಅಂಬೇಡ್ಕರ್ ಅವರು ಜನರ ವಿಮೋಚನೆಗಾಗಿ ನಾಳೆಯ ಸಮಾನತೆಯ ಸಮಾಜಕ್ಕಾಗಿ ಅವಿಶ್ರಾಂತವಾಗಿ ಶ್ರಮಿಸಿ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾಗಿ ಪ್ರಪಂಚದಲ್ಲಿಯೇ ಅತ್ಯುನ್ನತ ಸಂವಿಧಾನವನ್ನು ಭಾರತಕ್ಕೆ ನೀಡಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಿವಕುಮಾರ್, ಬಸವರಾಜ, ಆದಿಲ್ ಖಾನ್, ಎಂ.ಡಿ. ಹಯಾತ್, ರೆಹಮತ್ ಉಲ್ಲಾ, ಫರ್ಹಾನ್ ಸೇರಿದಂತೆ ಇತರರು ಇದ್ದರು.

## ದಸಂಸದಿಂದ ಅಂಬೇಡ್ಕರ್ ಪರಿನಿರ್ವಾಣ ದಿನ



ದಾವಣಗೆರೆ, ಡಿ.6- ಅಂಬೇಡ್ಕರ್ ಅವರ 64ನೇ ಪರಿನಿರ್ವಾಣ ದಿನಾಚರಣೆ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ) ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಇಂದು ಅಂಬೇಡ್ಕರ್ ಅವರನ್ನು ಸ್ಮರಿಸಲಾಯಿತು.

ಅಂಬೇಡ್ಕರ್ ವೃತ್ತದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಸಮಿತಿ ಜಿಲ್ಲಾ ಸಂಚಾಲಕ ಕುಂದವಾಡ ಮಂಜುನಾಥ್ ನೇತೃತ್ವದಲ್ಲಿ ಪದಾಧಿಕಾರಿಗಳು ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು.

ಜಾತಿ ವ್ಯವಸ್ಥೆಯನ್ನು ಬದಲಾವಣೆ ಮಾಡುವಲ್ಲಿ ಅಂಬೇಡ್ಕರ್ ಅವರು ಮಾಡಿದ ಹೋರಾಟ ನಿಜಕ್ಕೂ ಮರೆಯಲಾಗದು ಎಂದು ಕುಂದವಾಡ ಮಂಜುನಾಥ್ ತಿಳಿಸಿದರು. ಪ್ರಜಾಪ್ರಭುತ್ವದಲ್ಲಿ ಸಹಬಾಳ್ವೆಯಿಂದ ಬದುಕಲು ದಾರಿ ತೋರಿಸಿಕೊಟ್ಟಂತವರು ನಮ್ಮ ಹೆಮ್ಮೆಯ ಅಂಬೇಡ್ಕರ್ ಅವರು ನಮ್ಮ ದೇಶದಲ್ಲಿ ಹುಟ್ಟಿದ್ದಾರೆ ಎಂದು ಹೇಳಿಕೊಳ್ಳಲು ನನಗೆ ಹೆಮ್ಮೆಯಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಸತ್ಯಪ್ಪ, ಬುಳ್ಳಸಾಗರ ಸಿದ್ದರಾಮಣ್ಣ, ತಾಲ್ಲೂಕು ಸಂಚಾಲಕ ಪರಮೇಶ್ ಪುಟಗನಾಳ್, ಪ್ರದೀಪ್ ಕೆಟಿಜೆ ನಗರ, ಗೋಪನಾಳ್ ಚಂದ್ರಪ್ಪ, ಬಾತಿ ಸಿದ್ದೇಶ್, ಯುವ ಒಕ್ಕೂಟದ ಕುಂದವಾಡ ಮಂಜುನಾಥ್, ಅಣಜಿ ಹನುಮಂತಪ್ಪ, ಬೇತೂರು ಹನುಮಂತಪ್ಪ, ದುರ್ಗಾಪ್ರಸಾದ್ ಸೇರಿದಂತೆ ಇತರರು ಇದ್ದರು.

## ಬಾಗಿಲಿಗೆ ಪಾಲಿಕೆ ನಿಷ್ಪ್ರಯೋಜಕ

**(1ನೇ ಪುಟದಿಂದ)** ಕೇಳುವವರಿಲ್ಲವಾಗಿದೆ. ಇದೇ ರೀತಿ ಮುಂದುವರೆದರೆ ಪಾಲಿಕೆ ಗೇಟ್‌ಗೆ ಬೀಗ ಹಾಕಿ ಘೇರಾವ್ ಹಾಕುವ ಬಗ್ಗೆ ಚಿಂತಿಸಲಾಗುವುದು ಎಂದರು. ಕಾರ್ಯಕ್ರಮದ ಹೆಸರಿನಲ್ಲಿ ಹಂಚುತ್ತಿರುವ ಕರಪತ್ರಗಳಲ್ಲಿ ಸ್ಮಾರ್ಟ್ ಸಿಟಿ ಹಾಗೂ ಜಲಸಿರಿ ಯೋಜನೆ ಬಿಜೆಪಿ ನಾಯಕರದ್ದು ಎಂಬಂತೆ ಬಿಂಬಿಸಲಾಗುತ್ತಿದೆ ಎಂದ ಅವರು, ಈ ಯೋಜನೆಗಳು ಡಾ.ಶಾಮನೂರು ಶಿವಶಂಕರಪ್ಪ ಹಾಗೂ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಶ್ರಮದ ಫಲ. ಈ ಬಗ್ಗೆ ಬಹಿರಂಗ ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

ಪತ್ರಿಕಾಗೋಷ್ಠಿಯಲ್ಲಿ ಪಾಲಿಕೆ ವಿಪಕ್ಷ ಸದಸ್ಯರಾದ ಮಂಜುನಾಥ ಗಡಿಗುಡಾಳ್, ಜೆ.ಡಿ. ಪ್ರಕಾಶ್, ಉದಯಕುಮಾರ್, ಜಾಕಿರ್ ಅಲಿ, ಮುಖಂಡರಾದ ಗಣೇಶ್ ಹುಲ್ಮನಿ, ಕೊಟ್ರಯ್ಯ, ಮಂಜುನಾಥ ಇಟ್ಟಿಗುಡಿ ಹಾಗೂ ಇತರರಿದ್ದರು.

## ಮಹಾಪರಿನಿರ್ವಾಣ ದಿನಾಚರಣೆ

**(1ನೇ ಪುಟದಿಂದ)** ಶ್ರೀಮತಿ ಪದ್ಮಾ ಬಸವಂತಪ್ಪ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಶ್ರೀಮತಿ ರೇಷ್ಮಾ ಕೌಸರ್, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಶ್ರೀಮತಿ ನಜ್ಮಾ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಮೇಶ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.


## ಹರಿಹರ ಮರ್ಚೆಂಟ್ಸ್ ಸಹಕಾರಿಗೆ 9.72 ಲಕ್ಷ ರೂ. ಲಾಭ

ಹರಿಹರ, ಡಿ.6- ಹರಿಹರ ಮರ್ಚೆಂಟ್ಸ್ ಸೌಹಾರ್ದ ಕೋ-ಆಪರೇಟಿವ್ ನಿಯಮಿತವು 2019-20 ನೇ ಸಾಲಿನಲ್ಲಿ 9,72,133 ರು.ಗಳ ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಹೆಚ್.ಎಂ. ನಾಗರಾಜ್ ತಿಳಿಸಿದ್ದಾರೆ.

ನಗರದ ರಚನಾ ಕ್ರೀಡಾ ಟ್ರಸ್ಟ್ ಕಚೇರಿಯಲ್ಲಿ ಇಂದು ನಡೆದ ಹರಿಹರ ಮರ್ಚೆಂಟ್ಸ್ ಸೌಹಾರ್ದ ಕೋ-ಆಪ್ ನಿಯಮಿತದ ಆರನೇ ವರ್ಷದ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈ ಸಂಸ್ಥೆಯು ಆರನೇ ವರ್ಷಕ್ಕೆ ಪಾದಾರ್ಪಣೆ ಮಾಡಿದೆ. ಸದಸ್ಯರ ಸರ್ವತೋಮುಖ ಅಭಿವೃದ್ಧಿಗಾಗಿ ಅವರ ಆರ್ಥಿಕ ಮಟ್ಟವನ್ನು ಸುಧಾರಿಸಿಕೊಳ್ಳಲು ಹಿಂದುಳಿದ ಸಣ್ಣ, ಅತಿ ಸಣ್ಣ, ಮಧ್ಯಮ ವರ್ಗದ ವ್ಯಾಪಾರಿಗಳಿಗೆ ಸಾಲ ಸೌಲಭ್ಯಗಳನ್ನು ನೀಡಲಾಗಿದೆ ಎಂದು ಅವರು ಹೇಳಿದರು.

ಸಹಕಾರಿಯು 24,02,000 ರು. ಷೇರು



ಬಂಡವಾಳ, 1,76,56,298 ವಿವಿಧ ರೀತಿಯ ಠೇವಣಿ ಹೊಂದಿದೆ. 1,86,20,467 ರು.ಗಳ ಸಾಲ ಸೌಲಭ್ಯ ನೀಡಲಾಗಿದೆ. 43,38,640 ರು. ಠೇವಣಿ ಇಡಲಾಗಿದೆ ಎಂದು ವಿವರಿಸಿದರು.

ಈ ಸಂದರ್ಭದಲ್ಲಿ ಉಪಾಧ್ಯಕ್ಷ ಡಾ. ಪ್ರವೀಣ್ ಹೆಗಡೆ, ನಿರ್ದೇಶಕರಾದ ಜಿ.ಕೆ. ವೀರಣ್ಣ, ಹೆಚ್.ಎಸ್. ಮಂಜುನಾಥ್, ಜಿ. ನಂಜಪ್ಪ, ಹೆಚ್.ವಿ. ಸುಜಯ್, ಮಯೂರ್ ಹೆಚ್.ಎನ್, ರಾಘವೇಂದ್ರ ಬೊಂಗಾಳೆ, ಡಾ. ಸೀಮಾ ಎನ್, ಸುನೀತಾ ಪಿ. ಬದ್ದಿ, ನಾಗರತ್ನ ಜಿ.ಕೆ, ಮಂಜುಳಾ ಪ್ರಸಾದ್, ತಾಪಂ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ, ಸಿಬ್ಬಂದಿಗಳಾದ ಕಾರ್ಯದರ್ಶಿ ಶಿವನಗೌಡ್ರು, ಬೀರಪ್ಪ ಕಮತರ, ಶ್ರೀನಾಥ್ ಪಿ.ಬಿ. ಕರಿಬಸಪ್ಪ, ಪಿ.ಎಸ್., ಪಿಗ್ಮಿ ಸಂಗ್ರಹಕಾರರಾದ ವೀರೇಶ್ ನೀಲಗುಂದ, ಎಸ್.ಬಿ. ಕುಂಚೂರು, ಪರಶುರಾಮ್ ಪವಾರ್, ಜಿ.ವಿ. ಬಸವರಾಜ್, ರಾಘವೇಂದ್ರ ಮತ್ತು ಇತರರು ಹಾಜರಿದ್ದರು.

## ಅಭಿವೃದ್ಧಿ ಮಾಡಲಾಗದ ಶಾಸಕರಿಂದ ರಾಗ

**(1ನೇ ಪುಟದಿಂದ)** ಪಕ್ಷದ ಅಧ್ಯಕ್ಷ ಹನಗವಾಡಿ ಎಸ್.ಎಂ. ವೀರೇಶ್ ಮಾತನಾಡಿ, ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ತೆಗೆದುಕೊಳ್ಳುವ ಮತದಾರರ ನಿರ್ಧಾರಗಳಿಂದ ದೇಶದ ಸ್ಥಿತಿಗತಿಗಳು ಬದಲಾವಣೆಗಳನ್ನು ತರುತ್ತವೆ, ಕಾರ್ಯಕರ್ತರನ್ನು ನಾಯಕರನ್ನಾಗಿ ಮಾಡುವ ಚುನಾವಣೆ ಇದಾಗಿದೆ. ಪಕ್ಷಕ್ಕೆ ಯಾರು ನಿಷ್ಠೆಯಿಂದ ಇರುತ್ತಾರೋ ಅಂತವರಿಗೆ ಮೊದಲು ಆದ್ಯತೆಯನ್ನು ಪಕ್ಷ ನೀಡುತ್ತದೆ ಎಂದು ತಿಳಿಸಿದರು.

ಜಿಪಂ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ ಮಾತನಾಡಿ, ಕ್ಷೇತ್ರದ ಶಾಸಕ ಎಸ್. ರಾಮಪ್ಪನವರು ಕುಣಿಯಲಿಕ್ಕೆ ಬಾರದೆ ನೆಲ ಸೊಟ್ಟು ಎಂಬಂತೆ ವರ್ತಿಸುತ್ತಿದ್ದಾರೆ. ಕ್ಷೇತ್ರದ ಜನರು ನೀವು ಎಷ್ಟರ ಮಟ್ಟಿಗೆ ಅಭಿವೃದ್ಧಿ ಚಿಂತನೆಯನ್ನು ಮಾಡುತ್ತಿದ್ದೀರಾ ಎಂಬುದನ್ನು ಗಮನಿಸುತ್ತಿದ್ದಾರೆ. ಇಲ್ಲಿನ ಜನರು ಯಾರೂ ದಡ್ಡರಿಲ್ಲ. ಅವರಿಗೆ ಕಷ್ಟಗಳು ಬಂದಾಗ ಯಾವ ವ್ಯಕ್ತಿಗಳು ಸ್ಪಂದಿಸುತ್ತಾರೆ ಎಂಬುದನ್ನು ಅರಿತಿದ್ದಾರೆ. ಮುಂದಿನ ದಿನಗಳಲ್ಲಿ ಏನು ಆಗುತ್ತದೆ ಎಂಬುದನ್ನು ಕಾದು ನೋಡಿ ಮತ್ತು ಗ್ರಾಮ

**ಕ್ಷೇತ್ರದ ಮುಖಂಡರು ತಮ್ಮ ಚುನಾವಣೆ ಬಂದಾಗ ಕಾರ್ಯಕರ್ತರು ಎಷ್ಟು ನಿಷ್ಠೆಯಿಂದ ಕೆಲಸವನ್ನು ಮಾಡಿರುತ್ತಾರೆ. ಅದೇ ರೀತಿಯಲ್ಲಿ ಮುಖಂಡರೂ ಸಹ ಕಾರ್ಯಕರ್ತರ ಗೆಲುವಿಗೆ ನಿಷ್ಠೆಯಿಂದ ಕೆಲಸ ಮಾಡಿ ಅವರುಗಳು ಗೆಲ್ಲುವಂತೆ ಮಾಡಬೇಕು.**
**-ಜಿಗಳಿ ಹನುಮಗೌಡ**

ಪಂಚಾಯತಿ ಚುನಾವಣೆಯಲ್ಲಿ ಆದಷ್ಟೂ ಮುಖಂಡರ ಮಾತಿಗೆ ಯುವಕರು ಮನ್ನಣೆ ಕೊಟ್ಟು ಹೆಚ್ಚು ಅವಿರೋಧವಾಗಿ ಆಯ್ಕೆಯಾಗುವ ನಿಟ್ಟಿನಲ್ಲಿ ಹೆಜ್ಜೆ ಹಾಕಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಬಯಲು ಸೀಮೆ ಪ್ರಾಧಿಕಾರದ ಅಧ್ಯಕ್ಷ ಜೀವನಮೂರ್ತಿ, ಬಿಜೆಪಿ ಗ್ರಾಮೀಣ ಘಟಕದ ಅಧ್ಯಕ್ಷ ಹಿಂಡಸಘಟ್ಟ ಲಿಂಗರಾಜ್, ಅಣ್ಣಪ್ಪ ಐರಣಿ, ಬಾತಿ ಚಂದ್ರಶೇಖರ್, ನಾಗರಾಜ್ ಕೊಂಡಜ್ಜಿ, ನಾಗರಾಜ್ ಹಾಗೂ ಇತರರು ಹಾಜರಿದ್ದರು.

## ಈ ವರ್ಷ ಎರಡು ದಿನಗಳು ಸರಳ 'ಹರ ಜಾತ್ರೆ'

**(1ನೇ ಪುಟದಿಂದ)** ಉಪಾಧ್ಯಕ್ಷರನ್ನಾಗಿ ಶ್ರೀಮತಿ ವಸಂತ ಹುಲ್ಲತ್ತಿ ಅವರನ್ನು ಆಯ್ಕೆ ಮಾಡಲಾಯಿತು.

ಈ ಸಂದರ್ಭದಲ್ಲಿ ಧರ್ಮದರ್ಶಿಗಳಾದ ಪಿ.ಡಿ.ಶಿರೂರು, ವಿಧಾನ ಪರಿಷತ್ ಮಾಜಿ ಸದಸ್ಯ ಸೋಮಣ್ಣ ಬೇವಿನಮರದ, ಸಮಾಜದ ಹಿರಿಯರಾದ ಹೊಳೆಸಿರಿಗೆರೆಯ ನಾಗನಗೌಡರು, ಹರಿಹರ ತಾಲ್ಲೂಕು ಸಮಾಜದ ಅಧ್ಯಕ್ಷ ಗುಳದಳ್ಳಿ ಶೇಖರಪ್ಪ, ನಾಗರಾಜ್, ಪರಮೇಶ್, ಮಂಜುನಾಥ ಸ್ವಾಮಿ, ಮಹೇಶ್ ಹಾವೇರಿ, ಶಶಿಧರ ಪೂಜಾರ್, ಮಲ್ಲಿಕಾರ್ಜುನ ಹಾವೇರಿ, ಸಿ.ಆರ್.ಬಳ್ಳಾರಿ, ಹರಿಹರ ನಗರಸಭಾ ಸದಸ್ಯ ಸಿದ್ದೇಶ್, ಯುವ ಘಟಕದ ಸಂಘಟನಾ ಕಾರ್ಯದರ್ಶಿ ಕರಿಬಸಪ್ಪ ಮುಂತಾದವರು ಉಪಸ್ಥಿತರಿದ್ದರು.

## ಆಂಧ್ರದಲ್ಲಿ ರೋಗ

**(1ನೇ ಪುಟದಿಂದ)** ಹಾಗೂ ವಾಕರಿಕೆಗೆ ಗುರಿಯಾಗಿ ನಂತರ ಪ್ರಜ್ಞೆ ಕಳೆದುಕೊಳ್ಳುತ್ತಿದ್ದಾರೆ. ಇದಕ್ಕೆ ಕಾರಣ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ.

ಇವೇ ಲಕ್ಷಣಗಳಿಂದ ವಿಜಯವಾಡದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದ 45 ವರ್ಷದ ವ್ಯಕ್ತಿಯೊಬ್ಬರು ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ರೋಗಕ್ಕೆಗುರಿಯಾದಬಹುತೇಕರುಕೆಲವೇ ನಿಮಿಷಗಳಲ್ಲಿ ಚೇತರಿಸಿಕೊಂಡಿದ್ದಾರೆ.

ಆದರೆ, ಏಳು ಜನರನ್ನು ಉತ್ತಮ ಚಿಕಿತ್ಸೆಗಾಗಿ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ. ರೋಗದ ಬಗ್ಗೆ ತಿಳಿಯಲು ವೈದ್ಯರ ವಿಶೇಷ ತಂಡಗಳನ್ನು ಎಲೂರಿಗೆ ರವಾನಿಸಲಾಗಿದ್ದು, ಮನೆ ಮನೆ ಸಮೀಕ್ಷೆ ನಡೆಸಲಾಗುತ್ತಿದೆ.

## ವಿಪಕ್ಷಗಳ ಬೆಂಬಲ

**(1ನೇ ಪುಟದಿಂದ)** ಒತ್ತಾಯಿಸಿದ್ದಾರೆ.


ಸರ್ಕಾರ ಹಾಗೂ ಪ್ರತಿಭಟನಾಕಾರರ ನಡುವೆ ಹಲವು ಸುತ್ತಿನ ಮಾತುಕತೆಗಳು ನಡೆದಿವೆಯಾದರೂ ಯಾವುದೇ ಫಲ ದೊರೆತಿಲ್ಲ.

ಶನಿವಾರ ನಡೆಸಾಲದ ಮಾತುಕತೆ ಸಹ ಅಪೂರ್ಣವಾಗಿದೆ. ಡಿಸೆಂಬರ್ 9ರಂದು ಮತ್ತೊಂದು ಸುತ್ತಿನ ಸಭೆ ನಡೆಸುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

## ಹರಪನಹಳ್ಳಿ : ನಕಲಿ ಚಿನ್ನ ಮಾರಾಟದ ವಂಚಕರ ಬಂಧನ

ದಾವಣಗೆರೆ, ಡಿ.6 - ನಕಲಿ ಬಂಗಾರವನ್ನು ಅಸಲಿ ಎಂದು ನಂಬಿಸಿ ವಂಚಿಸಿ, ಹಲ್ಲೆ ಮಾಡಿ ಹಣ ಹಾಗೂ ಮೊಬೈಲ್‌ಗಳನ್ನು ದೋಚಿ ಪರಾರಿಯಾಗಿದ್ದ ಆರೋಪಿಯನ್ನು ಇಲ್ಲಿನ ಪೊಲೀಸರು ಬಂಧಿಸಿರುವ ಘಟನೆ ತಾಲ್ಲೂಕಿನ ಶಿರಗಾನಹಳ್ಳಿ ಗ್ರಾಮದ ಬಳಿ ನಿನ್ನೆ ಜರುಗಿದೆ.

ಹೊನ್ನಾಳಿ ಪಟ್ಟಣದ ಚಂದ್ರಪ್ಪ ಎಂಬುವವರಿಗೆ ಮೊದಲು ರಾಮಪ್ಪ ಹಾಗೂ ಲಕ್ಷ್ಮಣ ಹಾಗೂ ಇತರರು ಸೊಂಡೂರಿನಲ್ಲಿರುವ ನಮ್ಮ ಸಂಬಂಧಿಕರಿಗೆ ಮನೆ ಅಡಿಪಾಯ ಹಾಕುವಾಗ ಬಂಗಾರ ಸಿಕ್ಕಿದೆ, ಅವರ ಮಗಳ ಮದುವೆ ಇದ್ದು, ಅವರಿಗೆ ಹಣ ಬೇಕಾಗಿದೆ, ಕಡಿಮೆ ದರಕ್ಕೆ ಬಂಗಾರ ಕೊಡುತ್ತೇವೆ ಎಂದು ಹೇಳಿ ಮೊದಲಿಗೆ ಚಿಕ್ಕ ತುಣುಕು ಅಸಲಿ ಬಂಗಾರವನ್ನು



ತೆಲಿಗಿ ಗ್ರಾಮದ ಬಳಿ ಕರೆಸಿ ಕೊಟ್ಟಿದ್ದಾರೆ.

ದೂರುದಾರ ಚಂದ್ರಪ್ಪ ಹೊನ್ನಾಳಿಯಲ್ಲಿ ಬಂಗಾರದ ತುಣುಕನ್ನು ಬಂಗಾರದ ಅಂಗಡಿಯಲ್ಲಿ ಪರೀಕ್ಷಿಸಿದಾಗ ಅಸಲಿ ಬಂಗಾರ ಎಂದು ಗೊತ್ತಾಗಿದೆ. ಆಗ ಬಹಳಷ್ಟು ಬಂಗಾರ ಖರೀದಿಗೆ ಆರೋಪಿತರು ಹೇಳಿದ ಶಿರಗಾನಹಳ್ಳಿ ಕ್ರಾಸ್ ಬಳಿ 3 -12-2020 ರಂದು ಆಗಮಿಸಿ ಕಾಲು ಕಿಲೋ ಬಂಗಾರಕ್ಕೆ 2.75 ಲಕ್ಷ ರು.ಗಳನ್ನು ತಂದಿದ್ದಾರೆ.

ಶಿರಗಾನಹಳ್ಳಿ ಕ್ರಾಸ್ ಹೊಲದ ಬಳಿ ರಾಮಪ್ಪ ಹಾಗೂ ಲಕ್ಷ್ಮಣ ಎಂಬುವವರು ಹಣ ಕೊಡಿ ಎಂದು ಕೇಳುತ್ತಾರೆ, ಆಗ ಖರೀದಿ ಮಾಡಲು ಆಗಮಿಸಿದ್ದ ಚಂದ್ರಪ್ಪ ಹಾಗು ಇತರರು ಮೊದಲು ಬಂಗಾರ ಕೊಡಿ ಎಂದು ಕೇಳುತ್ತಾರೆ, ಆಗ ಇದ್ದಕ್ಕಿದ್ದ ಹಾಗೆ ಹೊಲದ ಕಡೆಯಿಂದ 5-6 ಜನರು ಚಾಕು, ಕಟ್ಟಿಗೆ ಹಿಡಿದು ಬಂದು ಹಲ್ಲೆ ಮಾಡಿ 2.75 ಲಕ್ಷ ರೂ. ಹಾಗೂ ಮೊಬೈಲ್ ಕಸಿದುಕೊಂಡು ಹಲ್ಲೆ ನಡೆಸಿ ಪರಾರಿಯಾಗಿರುತ್ತಾರೆ ಎಂದು ಹೊನ್ನಾಳಿಯ ಚಂದ್ರಪ್ಪ ಹಲುವಾಗಲು ಠಾಣೆಗೆ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಹಲುವಾಗಲು ಪೊಲೀಸರು ಡಿವೈಎಸ್ಪಿ ವಿ.ಎಸ್. ಹಾಲಮೂರ್ತಿ ರಾವ್ ನೇತೃತ್ವದ ತಂಡವು ಪ್ರಕರಣ ಭೇದಿಸಿ ಹಲ್ಲೆ ಮಾಡಿ ಹಣ ದೋಚಿದ ಆರೋಪಿತರಲೊಬ್ಬ ವಡೇರಹಳ್ಳಿ ಕೊರಚಹಟ್ಟಿಯ ಕೆ. ಎಂ.ಮಂಜಪ್ಪನನ್ನು ಬಂಧಿಸಿ ಆತನಿಂದ 2 ಲಕ್ಷ ರು. ಹಾಗೂ ಚಾಕು ವಶ ಪಡಿಸಿಕೊಂಡಿದ್ದಾರೆ.

**ಕರ್ನಾಟಕ ಗೃಹ ಮಂಡಳಿಯಲ್ಲಿ ಸೈಟ್‌ಗಳು ಮಾರಾಟಕ್ಕಿವೆ**
40x50 40x50 North ಅಕ್ಕ-ಪಕ್ಕ, 40x60 40x60 South ಅಕ್ಕ-ಪಕ್ಕ, 30x50 East, 50x80 South, 80 ಅಡಿ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ, ಮನೆಗಳು ಬಾಡಿಗೆಗೆ, ಲೀಜಿಗಿವೆ**
ಶಿವ ಪಾರ್ವತಿ ಬಡಾವಣೆಯಲ್ಲಿ 30x48 ಪೂರ್ವ, 30x56 ಪೂರ್ವ. ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 20x30 ದಕ್ಷಿಣ, 30x50 ಪೂರ್ವ. ಹೈಟೆಕ್ ಲೇಔಟ್ ನಲ್ಲಿ 30x50 ಪಶ್ಚಿಮ
ಸ್ವಾಮಿ ಏಜೆಂಟ್, ವಿದ್ಯಾನಗರ
ಮೊ. 97421 44715
ಶಾಮನೂರು ನಾಗರಾಜ
ಮೊ.98448 83303

**ಸೈಟ್‌ಗಳು ಮಾರಾಟಕ್ಕಿವೆ**
40x60 ಸೈಟ್‌ಗಳು ಮಾತ್ರ
40x60 North ವಿವೇಕಾನಂದ ಬಡಾವಣೆಯಲ್ಲಿ
40x60 South ಆಂಜನೇಯ ಬಡಾವಣೆಯಲ್ಲಿ
40x60 South ಶಿವಕುಮಾರಸ್ವಾಮಿ ಬಡಾವಣೆಯಲ್ಲಿ
40x60 West ಎಸ್. ಎಸ್. ಬಡಾವಣೆ 'ಎ' ಬ್ಲಾಕ್‌ನಲ್ಲಿ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
1) ವಿನಾಯಕ ಬಡಾವಣೆಯಲ್ಲಿ 30x40 ಪಶ್ಚಿಮ, 40x50 ಪೂರ್ವ. 2) ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ, 30x55 ಪೂರ್ವ, ದಕ್ಷಿಣ ಕಾರ್ನರ್. 3) 14 ಸಾವಿರ ಅಡಿ ದೇವರಬೆಳಕೆರೆ ರಸ್ತೆ, ಬಾಡಿಗೆಗೆ ಇದೆ.
ಶಾಮನೂರು ಧನ್ಯಕುಮಾರ್
ಮೊ.97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
ಮೊ.97421 44715

**ಸೈಟುಗಳು/ಮನೆಗಳು ಮಾರಾಟಕ್ಕಿವೆ**
ಶಿವಪಾರ್ವತಿ ಬಡಾವಣೆ 30×40 ಪಶ್ಚಿಮ ಕುವೆಂಪು ಬಡಾವಣೆ ಮನೆಗಳು 28×48 ಪೂರ್ವ, ಆರ್.ಟಿ.ಓ. ರಿಂಗ್ ರೋಡ್ ಸರ್ಕಲ್ ಹತ್ತಿರ 40×60 ಮನೆ, ಪೂರ್ವ ದಿಕ್ಕು, KHB ಕಾಲೋನಿ, 30×40 ಪೂರ್ವ ದಿಕ್ಕು ಕುವೆಂಪು ಬಡಾವಣೆ ಉತ್ತರ 40×60, ಪಶ್ಚಿಮ, ಸಿದ್ದವೀರಪ್ಪ ಬಡಾವಣೆ ಪಶ್ಚಿಮ, 30×50 ಪೂರ್ವ, ವಿನೋಬನಗರ, ರಿಂಗ್ ರೋಡ್ ಹತ್ತಿರ, 30×40 ಉತ್ತರ, ಕೊಡುವುದಕ್ಕೂ, ತೆಗೆದುಕೊಳ್ಳುವುದಕ್ಕೂ ಸಂಪರ್ಕಿಸಿ
ಸುರೇಶ್, 95911 60520
ಐಗೂರು ವಿಜಯ್‌ಕುಮಾರ್, 99457 02495

**ಮನೆ ಕಟ್ಟಿಕೊಡಲಾಗುವುದು**
SSS ಎಂಟರ್ ಪ್ರೈಸಸ್ ಇವರಿಂದ ಭಾರೀ ಕಡಿಮೆ ದರದಲ್ಲಿ ಮನೆ ಕಟ್ಟಿಕೊಡಲಾಗುವುದು.
ಆವರಗೆರೆ ಹುಂಡೈ ಶೋ ರೂಂ ಪಕ್ಕ,
20×30 ಸೈಟ್ ಮತ್ತು ಮನೆ ಕೇವಲ 21 ಲಕ್ಷಕ್ಕೆ ಕಟ್ಟಿಕೊಡಲಾಗುವುದು. ಸಂಪರ್ಕಿಸಿ : ಪಠಾಣ್,
8139988555, 96323 00009
ಬ್ಯಾಂಕ್ ಸಾಲ ಸೌಲಭ್ಯ ದೊರೆಯುತ್ತದೆ.

**WANTED**
SALES EXECUTIVE for Electric Vehicles, B.Com, SALES SKILL, BASIC COMPUTER KNOWLEDGE.
Whatsapp Resume : 86183 24082
TRACK & TRAIL STORE
Murughrajendra Complex, Hadadi Road, Davangere.

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ ಬಡಾವಣೆ ಹಾಗೂ ಶಾಮನೂರು, ಜೆ.ಹೆಚ್ ಪಟೇಲ್ ಲೇಔಟ್, ಸರಸ್ವತಿ ನಗರ 40x68 ಉತ್ತರಕ್ಕೆ ಸೈಟ್ ಮಾರಾಟಕ್ಕಿದೆ, ಸೈಟ್‌ಗಳು, ಮನೆ ಮತ್ತು ಹೊಲ, ಬಂಗ್ಲೆ ಸೈಟುಗಳು, ಅಪಾರ್ಟ್‌ಮೆಂಟ್ ಸೈಟುಗಳು ಯೋಗ್ಯ ಬೆಲೆಗೆ ದೊರೆಯುತ್ತವೆ.
ಅಭಿಷೇಕ್ ಅಳ್ಳೇರ್, ಏಜೆಂಟ್
ಮೊ.97315 12365

**ಬಿಲ್ಡಿಂಗ್ ಪೇಂಟಿಂಗ್**
ಹೊಸ ಮತ್ತು ಹಳೆ ಮನೆಗಳಿಗೆ. ಆಫೀಸ್, ಕಮರ್ಷಿಯಲ್ ಬಿಲ್ಡಿಂಗ್ ಫ್ಯಾಕ್ಟರಿ, ಗೋಡೌನ್‌ಗಳಿಗೆ ಕಡಿಮೆ ಖರ್ಚಿನಲ್ಲಿ ಗುಣಮಟ್ಟದ ಪೇಂಟಿಂಗ್ ಮಾಡಿಕೊಡಲಾಗುವುದು.
Mob: 95913 10082

**ಜಮೀನು ಮಾರಾಟಕ್ಕಿದೆ**
@ Rs 12 ಲಕ್ಷ ಎಕರೆಗೆ
(ತೆಲಗಿ ಹತ್ತಿರ)
74112 50447

**ಬೇಕಾಗಿದ್ದಾರೆ**
ಬ್ಯೂಟಿಷಿಯನ್ ಬೇಕಾಗಿದ್ದಾರೆ. ಅನುಭವುಳ್ಳವರಿಗೆ ಆದ್ಯತೆ.
ಸಂಬಳ : Rs 10,000+
ತರಳಬಾಳು ಬಡಾವಣೆ, 8ನೇ ಕ್ರಾಸ್, ಹದಡಿ ರಸ್ತೆ, ದಾವಣಗೆರೆ.
91644 91190

**ಮನೆ ಬಾಡಿಗೆಗೆ ಇದೆ**
ಶಿವಕುಮಾರ ಸ್ವಾಮಿ ಬಡಾವಣೆಯ, ಸೇಂಟ್‌ಜಾನ್ಸ್ ಹೈಸ್ಕೂಲ್ ಎದುರಿಗೆ ಮೊದಲನೇ ಮಹಡಿಯಲ್ಲಿ 3 ಬೆಡ್‌ರೂಂ, ಅಟ್ಯಾಚ್ಡ್ ಬಾತ್ ರೂಂ, ಬೋರ್‌ವೆಲ್ ನೀರಿನ ಹಾಗೂ ಸೋಲಾರ್ ನೀರಿನ ಸಂಪರ್ಕದೊಂದಿಗೆ ಪೂರ್ವ ದಿಕ್ಕಿನ ಮನೆ ಬಾಡಿಗೆಗೆ ಇದೆ.
94492 50565
90086 87009

**ಮನೆ ಲೀಸ್‌ಗೆ ಇದೆ**
ಸಿದ್ದವೀರಪ್ಪ ಬಡಾವಣೆ, 9ನೇ ಕ್ರಾಸ್‌ನಲ್ಲಿ ಡುಪ್ಲೆಕ್ಸ್, 30x40 ಅಳತೆಯ ಮನೆ ಲೀಸ್‌ಗೆ ಇದೆ.
ಸಂಪರ್ಕಿಸಿ:
81052 24478

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಶಿವಾಜಿ ನಗರ, ದುರ್ಗಮ್ಮನ ದೇವಸ್ಥಾನದ ಹತ್ತಿರ, ದಿಳ್ಳೆಪ್ಪನ ಗಲ್ಲಿಯಲ್ಲಿ (# 364/1) 'ಶ್ರೀ ನಿಧಿ ನಿವಾಸ'ದ ಮೊದಲನೇ ಮಹಡಿಯಲ್ಲಿರುವ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ
(ಸಸ್ಯಹಾರಿಗಳಿಗೆ ಮಾತ್ರ)
ಮೊ. : 94820 68652

**ಬೇಕಾಗಿದ್ದಾರೆ**
ನುರಿತ ಕೋರಲ್ ಡ್ರಾ, ಫೋಟೋ ಶಾಪ್, ಡಿಸೈನಿಂಗ್ ಹಾಗೂ ಟೈಪಿಂಗ್ ಅನುಭವ ಇರುವವರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ನೀಡಲಾಗುವುದು.
ರಾಜು ಪ್ರಿಂಟರ್ಸ್, ದಾವಣಗೆರೆ.
9964028818, 9742774340

**ಕೆಲಸಗಾರರು ಬೇಕಾಗಿದ್ದಾರೆ**
ಅನುಭವ ಇದ್ದವರಿಗೂ, ಅನುಭವ ಇಲ್ಲದವರಿಗೂ ಆದ್ಯತೆ ಉಂಟು. ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ, ಅನುಭವ ಇದ್ದವರಿಗೆ ಮಾತ್ರ.
ಸಂಬಳ 6000 ದಿಂದ 8000
ಶ್ರೀ ಮಂಜುನಾಥಸ್ವಾಮಿ ಆಟೋಮೊಬೈಲ್ಸ್
99729 74626

**Building for Rent**
on Mama's Joint on 1st Floor Prime Location is on Rent.
Contact :
98440-65638

**ಮಾರ್ಕ್ಸ್ ಕಾರ್ಡ್ ಕಳೆದಿದೆ**
ದಾವಣಗೆರೆ ಜೆ.ಹೆಚ್. ಪಟೇಲ್ ಕಾಲೇಜಿನ ವಿದ್ಯಾರ್ಥಿ ರಾಕೇಶ್ ಕೆ.ಆರ್ ತಂದೆ ರಾಜು ಕೆ.ಎನ್. ಈ ಹೆಸರಿನ ಬಿ.ಕಾಂ 6ನೇ ಸೆಮಿಸ್ಟರ್‌ನ ಮಾರ್ಕ್ಸ್‌ಕಾರ್ಡ್ (ರಿ.ನಂ. C2311014) ಹಾಗೂ ಕಾನ್ವೋಕೇಶನ್ ಸರ್ಟಿಫಿಕೇಟ್ ದಿನಾಂಕ 10.11.2020 ರಂದು ಕಳೆದಿದ್ದು ಯಾರಿಗಾದರೂ ಸಿಕ್ಕಲ್ಲಿ ಈ ಕೆಳಗಿನ ಮೊಬೈಲ್‌ಗೆ ತಲುಪಿಸಲು ಕೋರಲಾಗಿದೆ.
97386 24795

**Mayur Consultancy Services**
- Constructions
- Building Plans
- Approval Drawings
- Estimates
- 3D Elevations
- Simple Vaastu
Er. Mayur H N
B.E. (Civil), MBA, M.Tech, MIE
98444 88838

**Coding and Decoding classes**
2nd std to 5th std
Bruit abacus and vedic maths
96201 53806

**ಮೆಕ್ಯಾನಿಕ್ ಹಾಗೂ ಡೆಲಿವರಿ ಬಾಯ್ಸ್ ಬೇಕಾಗಿದ್ದಾರೆ**
HP ಮತ್ತು ಭಾರತ್ ಇಂಡಿಯನ್ ಏಜೆನ್ಸಿಯಲ್ಲಿ ಹಾಗೂ ಗ್ಯಾಸ್ ಸ್ಟೌವ್ ಹಾಗೂ ಗ್ಯಾಸ್ ಗೀಜರ್ ರಿಪೇರಿಯಲ್ಲಿ ಅನುಭವವಿರುವವರು ಬೇಕಾಗಿದ್ದಾರೆ.
ಶಂಕರಲೀಲಾ ಗ್ಯಾಸ್ ಏಜೆನ್ಸಿ
96117 49810

**ಸೈಟ್ ಮಾರಾಟಕ್ಕಿದೆ**
ಫೈನಲ್ ಅಪ್ರೂವಲ್ ಸೈಟ್ ಮಾರಾಟಕ್ಕಿದೆ. ಕಣಕುಪ್ಪೆ ಲೇಔಟ್, ಸೈಟ್ ನಂ - 06, ಮಾಗಾನಹಳ್ಳಿ ರಸ್ತೆ, ದಾವಣಗೆರೆ.
74111 04848
98862 09803

**ಕೆಲಸಗಾರರು ಬೇಕಾಗಿದ್ದಾರೆ**
ವಿನಾಯಕ ಸಾರಿಗೆ ಸಂಸ್ಥೆಯಲ್ಲಿ ಚಾಲಕ ಹಾಗೂ ನಿರ್ವಾಹಕ ಹುದ್ದೆಗೆ ಕೆಲಸಗಾರರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು (ಪುರುಷರಿಗೆ/ಮಹಿಳೆಯರಿಗೆ ಆದ್ಯತೆ)
94824 76109
91642 22937

**SBI Bank ಗ್ರಾಹಕರ ಸೇವಾ ಕೇಂದ್ರದಲ್ಲಿ**
ಜನ್‌ಧನ್ ಖಾತೆ ಮಾಡಲಾಗುತ್ತದೆ
('0' Account Open)
# 264/1 ಮಹಾರಾಜ ಪೇಟೆ, ವಿಠ್ಠಲ ಮಂದಿರ ಹತ್ತಿರ, ದಾವಣಗೆರೆ.
99806 10005

**ಮನೆ ಬಾಡಿಗೆಗೆ ಇದೆ**
# 853/6 ಶಿವಕುಮಾರ ಸ್ವಾಮಿ ಬಡಾವಣೆ ಮೊದಲನೇ ಹಂತ, 2ನೇ ಮೇನ್, 6ನೇ ಕ್ರಾಸ್‌ನಲ್ಲಿರುವ ಸಿಂಗಲ್ ಬೆಡ್‌ರೂಂ ಮನೆ, CMC ಹಾಗೂ ಬೋರ್ 2 ನೀರಿನ ವ್ಯವಸ್ಥೆ ಇರುವ ವಿಶಾಲವಾದ ಪಾರ್ಕಿಂಗ್ ಇರುವ ಮನೆ
ಸಂಪರ್ಕಿಸಿ:
63618 93176, 87622 10947
82773 91585

**ಸುವರ್ಣಾವಕಾಶ**
ಎಸ್ಸೆಸ್ಸೆಲ್ಸಿ, ಪಿಯುಸಿ, ಫೇಲಾದವರು ನೇರ ಬಿ.ಎ., ಎಂ.ಎ., ಬಿ.ಕಾಂ., ಎಂ.ಕಾಂ., ಬಿ.ಎಸ್ಸಿ., ಬಿ.ಎಡ್., ಎಂ.ಎಡ್., ಡಿಪ್ಲೋಮಾ, ಬಿ.ಟೆಕ್, ಎಂ.ಟೆಕ್ ಮುಂತಾದ ಕೋರ್ಸ್‌ಗಳನ್ನು ಪಾಸ್ ಮಾಡಲು ಸಂಪರ್ಕಿಸಿ
8296265995, 8971684391
ಬೆಳಿಗ್ಗೆ 10 ರಿಂದ ಸಂಜೆ 6 ರೊಳಗೆ

**ಜಮೀನು ಕೊಳ್ಳಲು ಬೇಕಾಗಿರುತ್ತದೆ.**
ಹರಿಹರ- ದಾವಣಗೆರೆ
74112 50447

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ ನುರಿತ ANM ಮತ್ತು GNM ಆದವರು ಈ ಕೆಳಗಿನ ಮೊಬೈಲ್ ನಂಬರ್ ಗೆ ತಮ್ಮ ಬಯೋಡೇಟಾದೊಂದಿಗೆ ಬಂದು ವಿಚಾರಿಸಿ:
98450 35710
94805 42277
08192 25931

**FOR SALE**
Good Condition Plywood Racks for Medical Store For Sale
97312 78249

**ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ**
6 BHK ಮನೆ 60x40 ವಿಸ್ತೀರ್ಣ, ಕಾರ್ ಪಾರ್ಕಿಂಗ್ ವ್ಯವಸ್ಥೆಯುಳ್ಳ ಡ್ಯೂಪ್ಲೆಕ್ಸ್ ಮನೆ # 1935/7, 10ನೇ ಕ್ರಾಸ್ ಸಿದ್ದವೀರಪ್ಪ ಬಡಾವಣೆಯಲ್ಲಿ ಮಾರಾಟಕ್ಕಿದೆ.
ಸಂಪರ್ಕಿಸಿ: 99007 00091

**ಬೇಕಾಗಿದ್ದಾರೆ**
ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆದ್ಯತೆ. ಕೆಲಸದ ಸಮಯ ಬೆಳಿಗ್ಗೆ 9.30 ರಿಂದ ಸಂಜೆ: 6:00 ಗಂಟೆವರೆಗೆ
94807 95548

**ಮನೆ ಬಾಡಿಗೆಗಿದೆ**
ನಿಜಲಿಂಗಪ್ಪ ಲೇಔಟ್ ನಲ್ಲಿ Single bedroom ಮತ್ತು Double Bedroom ಮನೆ ಖಾಲಿ ಇದೆ
(ಸಸ್ಯಹಾರಿಗಳಿಗೆ ಮಾತ್ರ)
ಸಂಪರ್ಕಿಸಿ
77605 62788

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಎಸ್.ಎಸ್. ಬಡಾವಣೆ 'ಎ' ಬ್ಲಾಕ್, 5ನೇ ಕ್ರಾಸ್ 'ಸಿದ್ಧಿ ನೆಸ್ಟ್' ಮೊದಲನೇ ಮಹಡಿಯಲ್ಲಿ 2 BHK ಹಾಗೂ ಸ್ಟುಡಿಯೋ ಪ್ಲಾಟ್ ಬಾಡಿಗೆಗೆ ಇದೆ. ಬೋರ್, ಕಾರ್ಪೊರೇಶನ್ ನೀರು ಹಾಗೂ ಲಿಫ್ಟ್ ಸೌಲಭ್ಯವಿದೆ.
ಆಸಕ್ತರು ಸಂಪರ್ಕಿಸಿ:
99028 57134
91104 80194

**ಹಾಲ್ ಬಾಡಿಗೆಗಿದೆ**
800 sqft ಹಾಲ್, ಮೊದಲನೇ ಮಹಡಿ ಮಾಮಾಸ್ ಜಾಯಿಂಟ್ ರೋಡ್, ಎಂ.ಸಿ.ಸಿ. 'ಬಿ' ಬ್ಲಾಕ್,
94489 21346
82177 72482

**ಭೂಮಿಕಾ ಮ್ಯಾಟ್ರಿಮನಿ**
ಲಿಂಗಾಯತ ವಧು-ವರರ ಕೇಂದ್ರ,
H.O: Vidya Nagara, 1st Bus Stop, Davangere.
B.O: BIET College Road, Near Hemavati Hostel
7760316576, 9008055813

**ಜಮೀನು ಮಾರಾಟಕ್ಕಿದೆ**
ತೆಲಗಿ ಹತ್ತಿರ
ಹರಪನಹಳ್ಳಿ ರಸ್ತೆಗೆ
@ Rs 18 ಲಕ್ಷ ಎಕರೆಗೆ
74112 50447

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ।। ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು


**ಹೊಸ ಮನೆ ಮಾರಾಟಕ್ಕಿದೆ**
ಬಾಲಾಜಿ ಲೇಔಟ್‌ನಲ್ಲಿ 30x50 (ಪಶ್ಚಿಮ) ಅಳತೆಯ ಹೊಸ ಮನೆ ಮಾರಾಟಕ್ಕಿದೆ.
ಸಂಪರ್ಕಿಸಿ:
97425 12125

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ದರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ. ವಯೋವೃದ್ದರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**COMMERCIAL COMPLEX FOR RENT**
Beside Royal Enfield Showroom,
Hadadi Main Road, DVG.
G+2 with Cellar & Lift - 8000 Sq ft.
94481 68525
97396 31144

**REQUIRED**
Qualification : 10th, PUC, B.Com., & B.Sc., with Computer Knowledge.
Interested People Contact b/w (Monday 10.30 am to 6.30 pm)
99809 60614, 99007 62288
Mangalam Hallmark Centre
# 592, 3rd Floor, Vinayaka Tower, Vijayalakshmi Road, Near Clock Tower, Davangere - 577 001

**ಅಮ್ಮ**



ಎಲ್ಲರೊಂದಿಗೆ ಬೆರೆತೆ
ನಿನ್ನನ್ನು ಮರೆತೆ, ನೀನು ನನ್ನ
ಬಾಳಿನ ಒರತೆ, ನಿನ್ನ ನಗು
ಮೊಗವು, ನನ್ನ ಬಾಳಿನ ಹಣತೆ.
- ಜಿ.ರಾಧ, ಉಪನ್ಯಾಸಕರು, ದಾವಣಗೆರೆ.

# ಡಾ|| ಅಂಬೇಡ್ಕರ್ ರಚನೆಯ ಸಂವಿಧಾನ ಬದಲಿಸಿದರೆ ರಕ್ತ ಕ್ರಾಂತಿ



ದಾವಣಗೆರೆ, ಡಿ.6- ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ವಿಶ್ವದ ಮಹಾನ್ ಚಿಂತಕರಲ್ಲಿ ಒಬ್ಬರಾಗಿದ್ದರು. ಅವರು ಭಾರತ ದೇಶಕ್ಕಾಗಿ ರಚಿಸಿದ ಸಂವಿಧಾನ ಜಗತ್ತಿನಲ್ಲಿಯೇ ಶ್ರೇಷ್ಠ ಸಂವಿಧಾನ ಎಂಬ ಹೆಗ್ಗಳಿಕೆ ಹೊಂದಿದೆ. ಕೇಂದ್ರ ಹಾಗೂ ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಆಡಳಿತಕ್ಕೆ ಬಂದ ದಿನದಿಂದಲೂ ತೆರೆಮರೆಯಲ್ಲಿ ಅಂಬೇಡ್ಕರ್ ರಚಿಸಿದ ಸಂವಿಧಾನವನ್ನು ಬದಲಿಸಲು ಹುನ್ನಾರ ನಡೆಸುತ್ತಿದೆ. ಬಿಜೆಪಿ ಸಂವಿಧಾನ ಬದಲಿಸಿದರೆ, ದೇಶದಲ್ಲಿ ರಕ್ತಕ್ರಾಂತಿ ಆಗಲಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ವಕ್ತಾರ ಡಿ. ಬಸವರಾಜ್ ಎಚ್ಚರಿಕೆ ಎಚ್ಚರಿಸಿದ್ದಾರೆ.

ನಗರದ ಅಂಬೇಡ್ಕರ್ ಸರ್ಕಲ್‌ನಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ಘಟಕದಿಂದ ಇಂದು ಏರ್ಪಡಿಸಿದ್ದ ಡಾ. ಅಂಬೇಡ್ಕರ್‌ರವರ 64ನೇ ಮಹಾಪರಿನಿರ್ವಾಣ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ. ಅಂಬೇಡ್ಕರ್ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಬಾಲ್ಯದಲ್ಲಿ ವಿದ್ಯಾಭ್ಯಾಸ ಮಾಡಲು ಹಲವು ಅಡ್ಡಿ-ಆತಂಕಗಳನ್ನು ಎದುರಿಸಿದ ಅಂಬೇಡ್ಕರ್ ಅವರು ಶಿಕ್ಷಣಕ್ಕೆ ಮಹತ್ವ ನೀಡಿ, ಸದಾ ಅಧ್ಯಯನಶೀಲರಾಗಿದ್ದರು. ಇಂದು ಜಗತ್ತಿನಲ್ಲಿಯೇ ಅತೀ ಹೆಚ್ಚು ಜ್ಞಾನ ಸಂಪಾದಿಸಿದವರು ಯಾರಾದರು ಇದ್ದರೆ ಅದು ಡಾ. ಅಂಬೇಡ್ಕರ್ ಮಾತ್ರ. ಹಾಗಾಗಿ ವಿಶ್ವ ಸಂಸ್ಥೆ ಅಂಬೇಡ್ಕರ್‌ರವರ ಜನ್ಮ ದಿನವಾದ ಏಪ್ರಿಲ್ 14ನ್ನು ವಿಶ್ವ ಜ್ಞಾನ ದಿನವನ್ನಾಗಿ ಆಚರಿಸಲು ಘೋಷಿಸಿದೆ ಎಂದು ಅವರು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್, ಕಾರ್ಮಿಕ ಘಟಕದ ಅಧ್ಯಕ್ಷ ಕೆ.ಎಂ. ಮಂಜುನಾಥ್, ಜಿಲ್ಲಾ ಕಾಂಗ್ರೆಸ್ ಕಿಸಾನ್ ಘಟಕದ ಪ್ರಧಾನ ಕಾರ್ಯದರ್ಶಿ ಎಸ್.ಕೆ. ಪ್ರವೀಣ್ ಕುಮಾರ್, ಮುಖಂಡರಾದ ಎ.ರಾಜಶೇಖರ್, ಡಿ.ಶಿವಕುಮಾರ್, ಬಾಷಾ ಆರ್.ಬಿ.ಝುಡ್, ಶ್ರೀನಿವಾಸ್ ಬಿ., ಪ್ರಕಾಶ್, ಮಂಜುನಾಥ್, ಜೆ.ವಿ. ವೆಂಕಟೇಶ್, ಬಿ.ಹೆಚ್. ಉದಯ್ ಕುಮಾರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಛಲವಾದಿ ಸಮಾಜಕ್ಕೂ ಅಭಿವೃದ್ಧಿ ನಿಗಮ ಸ್ಥಾಪನೆಗೆ ಆಗ್ರಹ

ದಾವಣಗೆರೆ, ಡಿ.6- ನಗರದ ಅಂಬೇಡ್ಕರ್ ವೃತ್ತದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ ನೂತನ ಪುತ್ಥಳಿ ನಿರ್ಮಿಸಬೇಕು ಹಾಗೂ ಅದಕ್ಕಾಗಿ 50 ಲಕ್ಷ ರು. ಬಿಡುಗಡೆ ಮಾಡುವಂತೆ ಜಿಲ್ಲಾ ಛಲವಾದಿ ಮಹಾಸಭಾ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಅಂಬೇಡ್ಕರ್ ಪುತ್ಥಳಿಯನ್ನು ನವೀನ ರೀತಿಯಲ್ಲಿ ನಿರ್ಮಿಸಲು 50 ಲಕ್ಷ ರು. ಬಿಡುಗಡೆ ಮಾಡುವಂತೆ ಈಗಾಗಲೇ ಮುಖ್ಯಮಂತ್ರಿಗಳಿಗೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಲೋಕಸಭಾ ಸದಸ್ಯರ ಸಮ್ಮುಖದಲ್ಲಿ ಮನವಿ ಸಲ್ಲಿಸಲಾಗಿದೆ. ನಗರ ಪಾಲಿಕೆಗೂ ಮನವಿ ಸಲ್ಲಿಸಲಾಗಿದೆ. ಆದರೆ ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಮಹಾಸಭಾದ ಅಧ್ಯಕ್ಷ ಎಸ್. ಶೇಖರಪ್ಪ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬಿಜೆಪಿ ಪಕ್ಷದಲ್ಲಿ ನಮ್ಮ ಸಮಾಜದ ಇಬ್ಬರು ಸಂಸದರಾಗಿದ್ದು, ನಾಲ್ವರು ಶಾಸಕರಾಗಿದ್ದಾರೆ. ಹಾವೇರಿ ಕ್ಷೇತ್ರದಲ್ಲಿ ಸಮಾಜದವರೇ ಆದ ನೆಹರೂ ಓಲೇಕಾರ್ ಸತತವಾಗಿ ಮೂರು ಬಾರಿ ಆಯ್ಕೆಯಾಗಿದ್ದು, ಸಚಿವ ಸ್ಥಾನದ ಅರ್ಹತೆ ಮತ್ತು ನಿಭಾಯಿಸಬಲ್ಲವರಾಗಿದ್ದರೂ ಇವರಿಗೆ ಅವಕಾಶ ನೀಡಿಲ್ಲ. ಇದರಿಂದ ಸಮಾಜದ ಬಂಧುಗಳಿಗೆ ಅಸಮಾಧಾನವಾಗಿದೆ ಎಂದು ಹೇಳಿದರು.

ಓಲೇಕಾರ್ ಅವರಿಗೆ ಸಚಿವ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಮಾನ್ಯತೆ ನೀಡಿ, ಸಚಿವರನ್ನಾಗಿ ನೇಮಕ ಮಾಡಬೇಕು. ಇಲ್ಲವಾದರೆ ಸಮೀಪಿಸುತ್ತಿರುವ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ ಚುನಾವಣೆಗಳಿಗೂ ಮುನ್ನ ನಮ್ಮ ಸಮಾಜಕ್ಕಾಗಿರುವ ಅನ್ಯಾಯದ ಬಗ್ಗೆ ಸಮಾಜ ಬಾಂಧವರಿಗೆ ಮನವರಿಕೆ ಮಾಡಿ ಬಿಜೆಪಿ ಸರ್ಕಾರಕ್ಕೆ ತಕ್ಕ ಪಾಠ ಕಲಿಸುತ್ತೇವೆಂದರು.

ಮುಖಂಡ ಓಂಕಾರಪ್ಪ ಮಾತನಾಡಿ, ವಿವಿಧ ಸಮುದಾಯಗಳಿಗೆ ಅಭಿವೃದ್ಧಿ ನಿಗಮ ಸ್ಥಾಪಿಸಿದಂತೆ ನಮ್ಮ ಸಮಾಜವನ್ನು ಪರಿಗಣಿಸಿ, ನಮ್ಮ ಸಮಾಜಕ್ಕೂ ಪ್ರತ್ಯೇಕ ಅಭಿವೃದ್ಧಿ ನಿಗಮ ಸ್ಥಾಪಿಸಲು ಈಗಾಗಲೇ ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಮನವಿ ಮಾಡಲಾಗಿದೆ ಎಂದ ಅವರು, ಒನಕೆ ಓಬವ್ವನ ಇತಿಹಾಸ, ಸಾಧನೆಗಳು ಮುಂದಿನ ಪೀಳಿಗೆಗೆ ತಿಳಿಯಬೇಕಾದರೆ ಸರ್ಕಾರದಿಂದಲೇ ಓಬ್ಬವ್ವನ ಜಯಂತಿ ಆಚರಣೆ ಮಾಡಬೇಕೆಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರಾಮಯ್ಯ, ಹೆಚ್.ಕೆ. ಚನ್ನಪ್ಪ, ತಿಮ್ಮಣ್ಣ, ರುದ್ರಮುನಿ, ದೇವೇಂದ್ರಪ್ಪ, ಚನ್ನಬಸಪ್ಪ ಸೇರಿದಂತೆ ಇತರರು ಇದ್ದರು.

**ಡಾ. ಬಿ.ಆರ್.ಅಂಬೇಡ್ಕರ್ ನೂತನ ಪುತ್ಥಳಿ ನಿರ್ಮಿಸಲು 50 ಲಕ್ಷ ರೂ. ಬಿಡುಗಡೆ ಮಾಡಬೇಕು.**

**ಒನಕೆ ಓಬವ್ವನ ಇತಿಹಾಸ, ಸಾಧನೆಗಳು ಮುಂದಿನ ಪೀಳಿಗೆಗೆ ತಿಳಿಯಬೇಕಾದರೆ ಸರ್ಕಾರದಿಂದಲೇ ಓಬ್ಬವ್ವನ ಜಯಂತಿ ಆಚರಿಸಬೇಕು.**

## ನಗರದಲ್ಲಿ ಅಂಗಡಿಗೆ ಕನ್ನ : ಮೊಬೈಲ್‌ಗಳ ಕಳವು

ದಾವಣಗೆರೆ, ಡಿ.6- ಮೊಬೈಲ್ ಅಂಗಡಿ ಬೀಗ ಮುರಿದು ಸುಮಾರು 2 ಲಕ್ಷ ರೂ. ಮೌಲ್ಯದ ಸೆಕೆಂಡ್ ಹ್ಯಾಂಡ್ ಮೊಬೈಲ್ ಹ್ಯಾಂಡ್ ಸೆಟ್‌ಗಳನ್ನು ಕಳವು ಮಾಡಿದ ಘಟನೆ ನಗರದ ಕೆಬಿ ಬಡಾವಣೆಯಲ್ಲಿ ನಿನ್ನೆ ತಡರಾತ್ರಿ ನಡೆದಿದೆ.

ಬಿಜೆಪಿ ಕಚೇರಿ ಸಮೀಪದ ಶಶಿ ಎಂಬುವರಿಗೆ ಸೇರಿದ ಮೊಬೈಲ್ ಅಂಗಡಿಯ ಶೆಟ್ರಸ್ ಬೀಗವನ್ನು ಮುರಿದು ಒಳ ಪ್ರವೇಶಿಸಿರುವ ಕಳ್ಳರು ಹೊಸ, ಹಳೆಯ ಮೊಬೈಲ್ ಮತ್ತಿತರೆ ವಸ್ತುಗಳನ್ನು ಕಳ್ಳತನ ಮಾಡಿದ್ದಾರೆ. ಈ ಸಂಬಂಧ ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಆರೋಪಿಗಳಿಗಾಗಿ ಪೊಲೀಸರು ಶೋಧ ಕೈಗೊಂಡಿದ್ದಾರೆ.

## ಬಂದ್‌ನಲ್ಲಿ ಭಾಗಿಯಾಗಲು ರೈತ ನಾಯಕರ ಕರೆ

(1ನೇ ಪುಟದಿಂದ) ಭಾರತ್ ಬಂದ್‌ಗೆ ಕರೆ ನೀಡಿದ್ದೇವೆ ಎಂದು ರೈತ ಮುಖಂಡ ಬಲದೇವ್ ಸಿಂಗ್ ಯಾದವ್ ಹೇಳಿದ್ದಾರೆ. ಭಾರತ್ ಬಂದ್ ಶಾಂತಿಯುತವಾಗಿರುವಂತೆ ನೋಡಿಕೊಳ್ಳಬೇಕೆಂದು ಕರೆ ನೀಡಿರುವ ಯಾದವ್, ಯಾರೊಬ್ಬರೂ ಹಿಂಸಾಚಾರಕ್ಕೆ ಇಳಿಯಲು ನಾವು ಅವಕಾಶ ಕೊಡುವುದಿಲ್ಲ. ನಾವು ಅಂಥವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎಂದೂ ಯಾದವ್ ಹೇಳಿದ್ದಾರೆ.



**ಛಲವಾದಿ ಮಹಾಸಭಾದಿಂದ ಪರಿನಿರ್ವಾಣ ದಿನ**

ದಾವಣಗೆರೆ ಡಿ. 6 – ಜಿಲ್ಲಾ ಛಲವಾದಿ ಮಹಾಸಭಾ ವತಿಯಿಂದ 64ನೇ ಮಹಾ ಪರಿನಿರ್ವಾಣ ದಿನದಂದು ಡಾ. ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಉಮೇಶ್ ದೊಡ್ಡಮನಿ, ನವೀನ್ ಕುಮಾರ್, ಪ್ರಸಾದ್ ಹಳ್ಳಳ್ಳಿ, ರವಿಕುಮಾರ್, ಗಿರೀಶ್, ಹೆಚ್.ಪಕ್ಕೀರಪ್ಪ ಬಾತಿ ಮತ್ತಿತರರ ಉಪಸ್ಥಿತಿಯಲ್ಲಿ ಮಾಲಾರ್ಪಣೆ ಮಾಡಲಾಯಿತು.

# ರಂಭಾಪುರಿ ಪೀಠಕ್ಕೆ ವೀರಶೈವ ಅಭಿವೃದ್ಧಿ ನಿಗಮದ ಅಧ್ಯಕ್ಷರ ಭೇಟಿ



ರಂಭಾಪುರಿ ಪೀಠ (ಬಾಳೆಹೊನ್ನೂರು), ಡಿ.6- ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಪ್ರಥಮ ಅಧ್ಯಕ್ಷ ಬಿ.ಎಸ್.ಪರಮಶಿವಯ್ಯ ಅವರು ಶ್ರೀ ಜಗದ್ಗುರು ರಂಭಾಪುರಿ ಪೀಠಕ್ಕೆ ಇಂದು ಭೇಟಿ ನೀಡಿ, ಶ್ರೀ ಜಗದ್ಗುರು ರೇಣುಕಾಚಾರ್ಯರಿಗೆ ಮತ್ತು ಕ್ಷೇತ್ರನಾಥ ಶ್ರೀ ವೀರಭದ್ರಸ್ವಾಮಿಗೆ ಪೂಜೆ ಸಲ್ಲಿಸಿ ಡಾ. ವೀರಸೋಮೇಶ್ವರ ಜಗದ್ಗುರು ಅವರ ದರ್ಶನ ಪಡೆದು ಆಶೀರ್ವಾದ ಪಡೆದರು.

ಈ ಸಂದರ್ಭದಲ್ಲಿ ಪರಮಶಿವಯ್ಯ ಅವರನ್ನುದ್ದೇಶಿಸಿ ಆಶೀರ್ವಚನ ನೀಡಿದ ಜಗದ್ಗುರುಗಳು, 'ನಿಮ್ಮ ನಾಯಕತ್ವದಲ್ಲಿ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದಿಂದ ಅತ್ಯುತ್ತಮ ಕಾರ್ಯಗಳು ಜರುಗುತ್ತವೆ ಎಂಬ ನಂಬಿಕೆಯಿದೆ. ವೀರಶೈವ ಲಿಂಗಾಯತ ಸಮುದಾಯದ ಐಕ್ಯತೆ, ಒಳ ಜಾತಿಗಳ ಸಂಘರ್ಷ ನಿಂತು ಸಾಮರಸ್ಯದಿಂದ ಸಮಾಜ ಸದೃಢಗೊಳ್ಳಲಿ' ಎಂದು ಶುಭ ಹಾರೈಸಿ ಶಾಲು, ಫಲ-ಪುಷ್ಪವಿತ್ತು ಆಶೀರ್ವದಿಸಿದರು.

## ರಾಣೇಬೆನ್ನೂರಿನಲ್ಲಿ ನಾಳೆ ಕಾರ್ತಿಕ

ರಾಣೇಬೆನ್ನೂರು, ಡಿ.6- ಇಲ್ಲಿನ ಬೀರೇಶ್ವರ ನಗರದ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಕಾರ್ತಿಕೋತ್ಸವವು ಸ್ವಾಮಿಯ ವಿಶೇಷ ಪೂಜೆಯೊಂದಿಗೆ ನಾಡಿದ್ದು ದಿನಾಂಕ 8 ರ ಮಂಗಳವಾರ ನಡೆಯಲಿದೆ. ಅಂದು ಬೆಳಿಗ್ಗೆ ಗುಗ್ಗಳವು ಪುರವಂತರ ಒಡಪುಗಳೊಂದಿಗೆ ಸಂಚರಿಸಿ ದೇವಸ್ಥಾನಕ್ಕೆ ಮರಳಲಿದೆ. ನಂತರ ಅನ್ನ ಸಂತರ್ಪಣೆ, ಸಂಜೆ ಕಾರ್ತಿಕೋತ್ಸವ ಜರುಗಲಿದೆ.

## ರಾಕೇಶ್‌ಕುಮಾರ್‌ಗೆ ಮುಂಬಡ್ತಿ



ದಾವಣಗೆರೆ, ಡಿ.6- ಇಲ್ಲಿನ ಆರ್‌ಟಿಓ ಅಧೀಕ್ಷಕ ಆರ್. ರಾಕೇಶ್‌ಕುಮಾರ್ ಅವರಿಗೆ ಮುಂಬಡ್ತಿ ನೀಡಿ, ತುಮಕೂರಿಗೆ ವರ್ಗಾಯಿಸಲಾಗಿದೆ.

# ಅಲ್ಪಸಂಖ್ಯಾತರ ಅನುದಾನ ಕಡಿತ: ಆರೋಪ

ದಾವಣಗೆರೆ, ಡಿ.6- ಬಿ.ಎಸ್. ಯಡಿಯೂರಪ್ಪ ಅವರ ನೇತೃತ್ವದ ರಾಜ್ಯ ಸರ್ಕಾರ ಅಲ್ಪಸಂಖ್ಯಾತರ ಕಲ್ಯಾಣ ನಿಧಿಗೆ ಅನುದಾನ ಕಡಿತಗೊಳಿಸಿ, ಹಲವು ಯೋಜನೆಗಳನ್ನು ನಿಲ್ಲಿಸುವ ಮೂಲಕ ತಾರತಮ್ಯ ಮಾಡುತ್ತಿದೆ ಎಂದು ಮುಸ್ಲಿಂ ಚಿಂತಕರ ಚಾವಡಿಯ ರಾಜ್ಯ ಕಾರ್ಯದರ್ಶಿ ಅನೀಸ್ ಪಾಷಾ ಆರೋಪಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2019-20ನೇ ಸಾಲಿನಲ್ಲಿ ಹೆಚ್.ಡಿ. ಕುಮಾರ ಸ್ವಾಮಿ ನೇತೃತ್ವದ ಸರ್ಕಾರ ಬಜೆಟ್‌ನಲ್ಲಿ ಘೋಷಿಸಿದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅನುದಾನವನ್ನು 1897 ಕೋಟಿ ರು.ಗಳಿಂದ 1571 ಕೋಟಿ ರೂ.ಗಳಿಗೆ ಕಡಿಮೆ ಮಾಡಿದೆ. 2020-21ನೇ ಸಾಲಿನಲ್ಲಿ ಯಡಿಯೂರಪ್ಪ ನೇತೃತ್ವದ ಸರ್ಕಾರ ಮಂಡಿಸಿದ ಬಜೆಟ್‌ನಲ್ಲಿ 1177 ಕೋಟಿ ರೂ.ಗಳಷ್ಟಿದ್ದ ಅನುದಾನವನ್ನು ಕಡಿತಗೊಳಿಸಿ 1055 ಕೋಟಿ ರು.ಗಳಿಗೆ ನಿಗದಿಗೊಳಿಸಿದೆ. ಇತ್ತೀಚೆಗೆ ಮತ್ತೆ 1055 ಕೋಟಿ ರು. ಅನುದಾನದಲ್ಲಿ 50 ಕೋಟಿ ರೂ. ಕಡಿತಗೊಳಿಸಿದೆ ಎಂದು ವಿವರಿಸಿದರು.

ಸರ್ಕಾರ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗ ಸಂಬಂಧಿಸಿದ ಯಾವುದೇ ಹೊಸ ಯೋಜನೆ ಜಾರಿಗೊಳಿಸದಿದ್ದರೂ ಈಗಾಗಲೇ ಜಾರಿಯಲ್ಲಿರುವ ಎಲ್ಲಾ ಯೋಜನೆಗಳನ್ನು ಮುಂದುವರೆಸಬೇಕು. ಬಜೆಟ್‌ನಲ್ಲಿ ನಿಗದಿಗೊಳಿಸಿದ ಅನುದಾನವನ್ನು ಪೂರ್ಣ ಬಿಡುಗಡೆ ಮಾಡಬೇಕೆಂದು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಹೇಳಿದರು.

ಖಜಾಂಚಿ ಜೆ.ಕಲೀಂ ಭಾಷಾ, ಸದಸ್ಯ ಇಮ್ತಿಯಾಜ್ ಹುಸೇನ್, ಕ್ರಿಶ್ಚಿಯನ್ ಜಿಲ್ಲಾ ವೆಲ್ಫೇರ್ ಅಸೋಸಿಯೇಷನ್‌ನ ಕಾರ್ಯದರ್ಶಿ ಕೆ.ಬಿ. ಜಾಕೋಬ್ ಪತ್ರಿಕಾಗೋಷ್ಠಿಯಲ್ಲಿದ್ದರು.

## ಇಂದು ಕಾರ್ಯಾಗಾರ

ಬಿಎಸ್ಸೆನ್ನೆಲ್ ಸೇವೆಗಳ ಕುರಿತು ಜಾಗೃತಿ ಮೂಡಿಸಲು ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ವ್ಯಾಪ್ತಿಯ ಗ್ರಾಹಕರಿಗೆ ಗೂಗಲ್ ಮೀಟ್ ಮೂಲಕ ಇಂದು ಬೆಳಿಗ್ಗೆ 10.30 ರಿಂದ 11.30 ರವರೆಗೆ ಕಾರ್ಯಾಗಾರ ನಡೆಯಲಿದೆ. ಗ್ರಾಹಕರು https://meet.google.com/cxf-bbvy-uhy ಲಿಂಕ್ ಕ್ಲಿಕ್ ಮಾಡಿ ಸಭೆಯಲ್ಲಿ ಪಾಲ್ಗೊಳ್ಳಬಹುದು ಎಂದು ಬಿಎಸ್ಸೆನ್ನೆಲ್ ಸಹಾಯಕ ಪ್ರಧಾನ ವ್ಯವಸ್ಥಾಪಕರು ತಿಳಿಸಿದ್ದಾರೆ.

# ಮನ ತಣಿಸಿ, ರಸದೌತಣ ನೀಡಿದ ಸಂಗೀತೋತ್ಸವ





ದಾವಣಗೆರೆ, ಡಿ.6- ಇಲ್ಲಿನ ಸುರ್ ತಾಲ್ ಸಂಗೀತ ಕಲಾ ಸಂಘದ ವತಿಯಿಂದ ಕಾರ್ತಿಕ ಮಾಸದ ಸಂಗೀತ ಉತ್ಸವವು ನೆರೆದಿದ್ದ ಕಲಾರಸಿಕರ ಮನತಣಿಸಿತಲ್ಲದೇ, ಸಂಗೀತದ ರಸದೌತಣವನ್ನು ಉಣಬಡಿಸಿತು.

ನಗರದ ರೋಟರಿ ಬಾಲಭವನದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ ಈ ಉತ್ಸವದಲ್ಲಿ ಬೆಂಗಳೂರಿನ ಕಲಾವಿದ ಎಂ.ಎಸ್. ಪ್ರದೀಪ್ ಕುಮಾರ್ ಅವರ ಸಿತಾರ್ ವಾದನ ಕಲಾ ಪ್ರತಿಭೆಯ ಪ್ರದರ್ಶನವನ್ನು ಕಲಾರಸಿಕರು ಆನಂದಿಸುತ್ತಾ ಮನಸೋತರು. ಅಲ್ಲದೇ, ಚಪ್ಪಾಳೆಯ ಮುಖಾಂತರ ಮೆಚ್ಚುಗೆ ವ್ಯಕ್ತಪಡಿಸಿದರು.

ಕಲಬುರಗಿಯ ಕಲಾವಿದ ರವಿ ಆಳಂದ ಅವರ ಹಿಂದೂಸ್ತಾನಿ ಗಾಯನ ಸಹ ಮನಮುಟ್ಟಿತು.

ಈ ಸಂಗೀತಕ್ಕೆ ಕೊಪ್ಪಳದ ಸುರೇಶ ಹಡಪದ್, ದಾವಣಗೆರೆಯ ರಾಘವೇಂದ್ರ ಸಾರಂಗ್ ತಬಲಾ ಸಾಥಿಗಳಾಗಿ ಮೆರಗು ನೀಡಿದರು.

ಇದೇ ವೇಳೆ ಕಲಾ ಸೇವಕ ಲಲಿತ ಕುಮಾರ ಜೈನ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ಲಿಂಗೇಶ್ವರ ಸಂಗೀತ ಕಲಾ ಸಂಘವು ಸಹಕಾರ ನೀಡಿತ್ತು.

# ಕೆನರಾ ಬ್ಯಾಂಕ್‌ಗೆ 198 ಕೋ. ರು. ವಂಚನೆ : ಪ್ರಕರಣ ದಾಖಲು

ನವದೆಹಲಿ ಡಿ. 6 – ಕೆನರಾ ಬ್ಯಾಂಕ್‌ಗೆ 198 ಕೋಟಿ ರು. ವಂಚಿಸಿದ ಆರೋಪದ ಮೇಲೆ ಯುನಿಟೆಕ್‌ನ ವ್ಯವಸ್ಥಾಪಕ ನಿರ್ದೇಶಕ ಸಂಜಯ್ ಚಂದ್ರ ಹಾಗೂ ಅವರ ತಂದೆ ರಮೇಶ್ ಮತ್ತು ಸಹೋದರ ಅಜಯ್ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ.

ಪ್ರಕರಣ ದಾಖಲಿಸಿದ ನಂತರ ಸಂಜಯ್ ಚಂದ್ರಗೆ ಸೇರಿದ ಹಲವಾರು ತಾಣಗಳ ಮೇಲೆ ಸಿಬಿಐ ದಾಳಿ ನಡಸಿದೆ. ಕಂಪನಿ ವಿರುದ್ಧ ಹಲವಾರು ಪ್ರಕರಣಗಳಿದ್ದು ದೆಹಲಿ ಪೊಲೀಸರು, ಸಿಬಿಐ ಹಾಗೂ ಜಾರಿ ನಿರ್ದೇಶನಾಲಯಗಳು ತನಿಖೆ ನಡೆಸುತ್ತಿವೆ.

ಚಂದ್ರ ವಿರುದ್ಧ 2ಜಿ ಪ್ರಕರಣ ಸಹ ದಾಖಲಿಸಲಾಗಿತ್ತು. ಆದರೆ, ವಿಚಾರಣಾ ನ್ಯಾಯಾಲಯ ದೋಷಮುಕ್ತಗೊಳಿಸಿದೆ. 43 ತಿಂಗಳ ಕಾಲ ತಿಹಾರ್ ಜೈಲಿನಲ್ಲಿದ್ದ ಸಂಜಯ್ ಚಂದ್ರ, ವೈದ್ಯಕೀಯ ಕಾರಣಗಳಿಂದಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

## ಹರಿಹರ : ನಾಳೆ ಕುರುಬ ಸಂಘದ ಸಭೆ

ಹರಿಹರ, ಡಿ.6- ಎಸ್ಟಿ ಹೋರಾಟದ ಪಾದಯಾತ್ರೆಯ ರೂಪುರೇಷೆಗಳ ಪ್ರಯುಕ್ತ ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ, ಶ್ರೀ ಈಶ್ವರಾನಂದ ಪುರಿ ಮಹಾಸ್ವಾಮೀಜಿ ದಿವ್ಯಸಾನ್ನಿಧ್ಯದಲ್ಲಿ ನಗರದ ಎಸ್.ಎಸ್.ಕೆ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯನ್ನು ಇದೇ ದಿನಾಂಕ 8 ರ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಕರೆಯಲಾಗಿದೆ.

ಈ ಸಭೆಗೆ ಶಾಸಕ ಎಸ್. ರಾಮಪ್ಪ ಸೇರಿದಂತೆ ಸಮಾಜದ ಮುಖಂಡರು ಭಾಗವಹಿಸಲಿದ್ದಾರೆ ಎಂದು ತಾಲ್ಲೂಕು ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಕೆ. ಜಡಿಯಪ್ಪ, ಗ್ರಾಮಾಂತರ ಘಟಕದ ಮುಖಂಡ ಕೆ.ಪಿ. ಗಂಗಾಧರ್ ತಿಳಿಸಿದ್ದಾರೆ.

## ಮೀಸಲಾತಿಗಾಗಿ 23ರಿಂದ ಪಾದಯಾತ್ರೆ

(1ನೇ ಪುಟದಿಂದ) ಸಮಾಜದ ಮುಖಂಡ ಗಂಗಾಧರ ಕಾರಿಗನೂರು ತಿಳಿಸಿದ್ದಾರೆ.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಅವರು, ಮೀಸಲಾತಿಗಾಗಿ ಈ ಹಿಂದೆ ಶ್ರೀಗಳು ಉಪವಾಸ ಸತ್ಯಾಗ್ರಹ ನಡೆಸಿದ್ದಾಗ ಮುಖ್ಯಮಂತ್ರಿಗಳು ಮೂರು ದಿನದೊಳಗೆ ಒಳ್ಳೆಯ ನಿರ್ಧಾರ ಪ್ರಕಟಿಸುವುದಾಗಿ ಹೇಳಿದ್ದರು. ಆದರೆ ಇಲ್ಲಿಯವರೆಗೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ಕಾರಣ ಪಾದಯಾತ್ರೆ ನಡೆಸಲು ಶ್ರೀಗಳು ಉದ್ದೇಶಿಸಿದ್ದಾರೆ ಎಂದರು.

ಪಾದಯಾತ್ರೆ ಯಶಸ್ವಿಗೊಳಿಸಲು ಜಿಲ್ಲಾ ಸಮಾಜ ಬಾಂಧವರೊಂದಿಗೆ ಚರ್ಚಿಸಲು ನಾಡಿದ್ದು ದಿನಾಂಕ 8 ರಂದು ಬೆಳಿಗ್ಗೆ 10.30ಕ್ಕೆ ನಗರದ ಚೇತನಾ ಹೋಟೆಲ್‌ನಲ್ಲಿ ಜಿಲ್ಲಾ ಪಂಚಮಸಾಲಿ ಸಮಾಜದ ಪೂರ್ವಭಾವಿ ಸಭೆ ಕರೆಯಲಾಗಿದೆ. ಸಭೆಯಲ್ಲಿ ಸಮಾಜದ ಮುಖಂಡ ವಿಜಯಾನಂದ ಕಾಶೆಂಪೂರ್ ಹಾಲಿ ಮಾಜಿ ಶಾಸಕರು, ಜನಪ್ರತಿನಿಧಿಗಳು ಆಗಮಿಸಲಿದ್ದಾರೆ ಎಂದು ಪ್ರಭು ಕಲಬುರ್ಗಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಂಜುನಾಥ್ ಅಗಡಿ, ಅಶೋಕ್ ಗೋಪನಾಳು, ಜಯಪ್ರಕಾಶ್ ಸತ್ತೂರು, ನಾಗರಾಜ ಕತ್ತಲಗೆರೆ ಇತರರು ಉಪಸ್ಥಿತರಿದ್ದರು.

## ಸ್ಪರ್ಧೆಗೆ ಜಗದೀಶಪ್ಪ ಬಣಕಾರ್ ಆಯ್ಕೆ

(1ನೇ ಪುಟದಿಂದ) ಕಲ್ಪಿಸಲಾಗಿದೆ. ಡಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೆ.ಆರ್. ಷಣ್ಮುಖಪ್ಪ ಅವರ ಅಧ್ಯಕ್ಷತೆಯಲ್ಲಿ ಬ್ಯಾಂಕಿನ ಸಭಾಂಗಣದಲ್ಲಿ ನಿನ್ನೆ ನಡೆದ ಬ್ಯಾಂಕಿನ ಆಡಳಿತ ಮಂಡಳಿಯ ಸಭೆಯಲ್ಲಿ ಈ ಆಯ್ಕೆ ಮಾಡಲಾಗಿದೆ.

ಅಪೆಕ್ಸ್ ಬ್ಯಾಂಕಿನ ಆಡಳಿತ ಮಂಡಳಿಗೆ ಇದೇ ದಿನಾಂಕ 28ರಂದು ಚುನಾವಣೆ ನಡೆಯಲಿದ್ದು, ಈ ಚುನಾವಣೆಗೆ ದಾವಣಗೆರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಪ್ರತಿನಿಧಿಯಾಗಿ ಸ್ಪರ್ಧಿಸಲು ಜಗದೀಶಪ್ಪ ಬಣಕಾರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಜಗದೀಶಪ್ಪ ಅವರ ಹೆಸರನ್ನು ನಿರ್ದೇಶಕ ಕೆ.ಹೆಚ್. ಷಣ್ಮುಖಪ್ಪ ಸೂಚಿಸಿದಾಗ, ಮತ್ತೋರ್ವ ನಿರ್ದೇಶಕ ಜಿ.ಎನ್. ಸ್ವಾಮಿ ಅನುಮೋದಿಸಿದರು.


## ಯತೀಶ್ ಅವರಿಗೆ ಪಿಹೆಚ್‌ಡಿ ಪದವಿ



ದಾವಣಗೆರೆ, ಡಿ.6 - ಆರ್.ಎಲ್ ಕಾನೂನು ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕ ಜಿ.ಎಸ್. ಯತೀಶ್ ಅವರು 'ಶಿಕ್ಷಣಕ್ಕೆ ಸಂಬಂಧಿಸಿದ ಸಂವಿಧಾನ ಹಕ್ಕುಗಳು ಮತ್ತು ಬಾಧ್ಯತೆಗಳು ಒಂದು ವಿಮರ್ಶಾತ್ಮಕ ಅಧ್ಯಯನ' ಕುರಿತು ಮಂಡಿಸಿದ ಪ್ರಬಂಧಕ್ಕೆ ಕುವೆಂಪು ವಿಶ್ವವಿದ್ಯಾಲಯವು ಪಿಹೆಚ್ ಡಿ ಪದವಿ ನೀಡಿದೆ. ಆರ್.ಎಲ್. ಕಾನೂನು ಕಾಲೇಜಿನ ನಿವೃತ್ತ ಪ್ರಾಂಶುಪಾಲರಾಗಿದ್ದ ಡಾ.ಬಿ.ಎಸ್. ರೆಡ್ಡಿ ಅವರು ಪ್ರಬಂಧಕ್ಕೆ ಮಾರ್ಗದರ್ಶನ ನೀಡಿದ್ದರು.

GODOWNS & OFFICE SPACE AVAILABLE ON RENT
AT
RAVI MILLS PREMISES
POONA-BANGALORE ROAD
CONTACT :
M/s R. Hanumanthappa & Son,
# 56/1,2, Hanumanthappa Building,
Poona-Bangalore Road, DAVANGERE-577002.
Phone Nos : (08192) - 258834 / 258836

# 'ಸೂಜಿ' ಕಾದಂಬರಿ ಕನ್ನಡ ಸಾರಸ್ವತ ಲೋಕಕ್ಕೆ ಉತ್ತಮ ಕೊಡುಗೆ





ಸಾಮಾನ್ಯವಾಗಿ ಮೊದಲ ಕೃತಿಗಳು ಅಷ್ಟೊಂದು ಪಕ್ವವಾಗಿರುವುದಿಲ್ಲ. ಆದರೆ, ಪಾಪು ಗುರು (ಎಸ್. ಗುರು ಬಸವರಾಜ) ಅವರ ಪ್ರಥಮ ಕಾದಂಬರಿ 'ಸೂಜಿ'ಯಲ್ಲಿ ಓದುಗರನ್ನು ಕುತೂಹಲದ ಘಟ್ಟ ದಾಟಿಸಿ ಸರಾಗವಾಗಿ ಓದಿ ಕೊಂಡು ಹೋಗುವ ಒಂದು ಸರಳ, ಸುಂದರ ಸಾಮಾಜಿಕ ಕಥೆಯ ನಿರೂಪಣೆಯನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ.

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಧನ ಸಹಾಯ ಪಡೆದ ಕೃತಿ ಇದೆಂಬುದು ಮತ್ತೊಂದು ವಿಶೇಷ ಸಂಗತಿ. ವೃತ್ತಿಯಲ್ಲಿ ಬಡಗಿ, ಮರ ಕೆತ್ತುತ್ತಾ ಕಲ್ಪನೆಯ ಹಂದರದಲ್ಲಿ ಒಂದು ಚೊಕ್ಕವಾದ ಆಕೃತಿಯನ್ನು ಸೂಜಿ ಕಾದಂಬರಿಯ ಕಥಾನಾಯಕಿ ಸುಜಾತಳಲ್ಲಿ ಮೂಡಿಸಿದ್ದಾರೆ. ಸಾಹಿತ್ಯ ಲೋಕಕ್ಕೆ ಈಗಾಗಲೇ ತಮ್ಮ 'ಮುಳ್ಳೆಲೆಯ ಮದ್ದು' ಕವನ ಸಂಕಲನದ ಮೂಲಕ ಪರಿಚಿತರಾಗಿರುವ ಪಾಪು ಗುರು ಪತ್ರಿಕಾ ವಿತರಣೆ ಮಾಡುತ್ತಲೇ ಕವಿಯಾಗಿ, ಕಾದಂಬರಿಕಾರರಾಗಿ ರೂಪುಗೊಂಡಿರುವುದು ಶ್ಲಾಘನೀಯ.

ಹೆಣ್ಣಿನ ಶೋಷಣೆ ಅನಾದಿ ಕಾಲದಿಂದಲೂ ಅವ್ಯಾಹತವಾಗಿ ನಡೆಯುತ್ತಲೇ ಬಂದಿದೆ. ಇದನ್ನು ಹಲವಾರು ಕಾದಂಬರಿಕಾರರು ರಂಗು ರಂಗಾಗಿ ತಮ್ಮ ಕೃತಿಗಳಿಗೆ ಬಳಸಿಕೊಂಡು ಮತ್ತಷ್ಟು ವೈಭವೀಕರಿಸಿರುವುದು ವಾಸ್ತವ. ಪಾಪು ಗುರು ಅವರ ಕಥಾ ವಸ್ತುವೂ ಕೂಡ ಒಂದು ಅಮಾಯಕ, ಮುಗ್ಧ, ಸಂಸ್ಕಾರಯುಕ್ತ, ಪಾಪ ಭೀರು, ನೈತಿಕತೆಯ ತಕ್ಕಡಿಯಲ್ಲಿ ತೂಗಲಾರದೆ ಬಳಲುವ ಒಂದು ಹೆಣ್ಣಿನ ಕರುಣಾಜನಕ ಕಥೆಯಾಗಿದೆ. ಬಡ ಕುಟುಂಬದಲ್ಲಿ ಜನಿಸಿದ ಸುಜಾತ ತನ್ನವರನ್ನೆಲ್ಲಾ ಕಳೆದುಕೊಂಡು, ತುತ್ತು ಅನ್ನಕ್ಕಾಗಿ ಕಾಮುಕ ಶಂಕ್ರಪ್ಪನ ಕಪಿ ಮುಷ್ಠಿಯಲ್ಲಿ ಸಿಲುಕಿ ಬಿಡಿಸಿಕೊಳ್ಳಲು ಪ್ರಯತ್ನಿಸಿದರೂ ನೈತಿಕತೆಯ ಅಡ್ಡಗೋಡೆಯ ಮೇಲೆ ನಿಂತು ಮತ್ತೆ ಪ್ರಪಾತಕ್ಕೆ ಬೀಳುವ, ಕೊನೆಗೆ ತಾನು ಮನಸಾರೆ ಪ್ರೀತಿಸಿದ್ದ ಕೃಷ್ಣನ ತೊಡೆಯ ಮೇಲೆ ತಲೆಯಿಟ್ಟು ತನ್ನ ಅಂತಿಮ ಆಸೆ ಪೂರೈಸಿಕೊಂಡ, ಸಾವಿನಲ್ಲಿ ನೆಮ್ಮದಿ ಕಂಡ 'ಸುಜಾತ' ಎಂಬ ಹೆಣ್ಣಿನ ಕಥೆ ಸೂಜಿಯಂತೆ ಓದುಗರ ಕಣ್ಣು ಚುಚ್ಚುತ್ತಲೇ ಹೋಗುತ್ತದೆ.

ಕಥಾನಾಯಕಿ ಪುತ್ರ ಮಾಧವನ ಮೂಲಕ ಇಡೀ ಕಥೆಯನ್ನು ಹೆಣೆದಿರುವ ಲೇಖಕರ ಜಾಣ್ಮೆ ಮೆಚ್ಚುವಂತಹದ್ದು. ಒಂದು ಕಲ್ಲು ಕ್ವಾರಿಯಿಂದ ಪ್ರಾರಂಭವಾದ ಕಥೆ, ಮತ್ತೊಂದು ಕಲ್ಲು ಕ್ವಾರಿಯ ಬಂಡೆಯ ಮೇಲೆ ಕುಳಿತು ತಾಯಿಯ ತ್ಯಾಗವನ್ನು, ಅಸಹಾಯಕತೆಯನ್ನು ನೆನೆಯುತ್ತಾ, ಓದುಗರ ಕಣ್ಣಂಚಿನಲ್ಲಿ ನೀರು ಜಿನುಗುವಂತೆ ಮಾಡುವಲ್ಲಿ ಲೇಖಕರ ಪ್ರಯತ್ನ ಯಶಸ್ವಿಯಾಗಿದೆ.

ಬಡವರಲ್ಲಿ ಶೀಲ, ಚಾರಿತ್ರ್ಯ, ನೈತಿಕತೆಯನ್ನು ಹಗುರವಾಗಿ ಪರಿಗಣಿಸುವ ಸಮಾಜದಲ್ಲಿ 'ಸೂಜಿ' ಕಾದಂಬರಿಯಲ್ಲಿ ಶೀಲ ರಕ್ಷಣೆಗಾಗಿ ಆತ್ಮಾಹುತಿ ಮಾಡಿಕೊಳ್ಳುವ ಸುಜಾತಳ ತಾಯಿ ಗೌರಿ ಆದರ್ಶಪ್ರಾಯಳಾಗಿ ನಿಲ್ಲುತ್ತಾಳೆ. ಒಡಹುಟ್ಟಿದ ಅಣ್ಣ ಕಾಶಿ, ತಂಗಿ ಶೀಲ ಅವರು ಅವಳ ಜೀವನದಲ್ಲಿ ಮತ್ತೆ ಭೇಟಿಯಾದರೂ ಅವರನ್ನು ಗುರುತಿಸಲಾಗದ ದಯನೀಯ ಸ್ಥಿತಿ ಸುಜಾತಳದು. ತಾನು ಅನಾಥೆಯೆಂದೇ ಕೊನೆವರೆಗೂ ಭಾವಿಸಿದ್ದ ಸುಜಾತಳಿಗೆ ಮೊದಲ ಪ್ರೇಮದ ಫಲವಾಗಿ ಪಡೆದ ಮಗ ಮಾಧವನೇ ಸರ್ವಸ್ವವಾಗಿರುತ್ತಾನೆ.

ತನ್ನ ಜನ್ಮ ವೃತ್ತಾಂತವನ್ನು ತಾಯಿಯ ಬಾಯಿಂದ ಕೇಳಿದ ಮಾಧವ ತನ್ನ ನಿಜ ತಂದೆಯನ್ನು ಹುಡುಕಿಸುವುದರ ಮೂಲಕ ಕಥೆಯನ್ನು ಸುಖಾಂತ್ಯಗೊಳಿಸಿದ್ದಾರೆ ಕಾದಂಬರಿಕಾರರು.


ಭಾಷೆಯ ಮೇಲೆ ಪ್ರಬುದ್ಧ ಹಿಡಿತ ಹೊಂದಿರುವ ಪಾಪು ಗುರು ಅವರ ಮೇಲೆ ಹಲವಾರು ಕಾದಂಬರಿಕಾರರು ಪ್ರಭಾವ ಬೀರಿರುವುದು ಕಥೆಯ ಓಟದಲ್ಲಿ ಕಂಡುಬರುತ್ತದೆ. ಕೆಳಸ್ತರದ ಜನರ ಜೀವನವನ್ನು ಯಥಾವತ್ತಾಗಿ ಚಿತ್ರಿಸಿದ್ದಾರೆ. ಡಿ.ವಿ.ಜಿ.ಯವರ ಕಗ್ಗ, ರಜನೀಶರ ಮುಕ್ತ ವಿಚಾರ, ಚಲನಚಿತ್ರ ಗೀತೆಗಳು ಇವೆಲ್ಲವನ್ನೂ ಸುಜಾತಳ ಮೂಲಕ ಓದುಗರಿಗೆ ಹಂಚುತ್ತಾ ಕಥಾ ನಾಯಕಿಯ ಮನೋಕ್ಲೇಶಕ್ಕೆ, ತನ್ನನ್ನು ತಾನು ಸಮರ್ಥಿಸಿಕೊಳ್ಳಲು ಮತ್ತು ಸಂತೈಸಿಕೊಳ್ಳುವ ಸ್ವಗತಗಳಾಗಿ ಓದುಗರು "ಸುಜಾತ" ಪಾತ್ರಧಾರಿಯನ್ನು ಕೀಳಾಗಿ ಕಾಣದೆ ಕನಿಕರಿಸುವಂತೆ ಮಾಡಿದೆ. ಕೃಷ್ಣನ ಬಸಿರನ್ನು ಹೊತ್ತು ಹೆಸರಿಗೆ ಗಂಡನೆಂದು ಆಕಸ್ಮಿಕವಾಗಿ ಅವಳ ಜೀವನ ಪ್ರವೇಶಿಸಿದ ಮಂಜ ಕೊನೆವರೆಗೂ ಅವಳಿಗೆ ನ್ಯಾಯ ಒದಗಿಸುವಲ್ಲಿ ವಿಫಲನಾಗುತ್ತಾನೆ.

ಆತ ಕೊಡುವ ಎಲ್ಲ ಕಷ್ಟಗಳನ್ನು ತನ್ನ ಪಾಪ ಪ್ರಜ್ಞೆಯಿಂದಾಗಿ ಸಹಿಸಿಕೊಳ್ಳುವ 'ಸುಜಾತ'ಳ ಚಿತ್ತಕ್ಷೋಭೆಯನ್ನು ಕಾದಂಬರಿಕಾರರು ಸಮರ್ಥವಾಗಿ ಚಿತ್ರಿಸಿದ್ದಾರೆ. ಮಗಳಂತೆ ಕಾಣುತ್ತಿದ್ದ ಸಣ್ಣಜ್ಜನಲ್ಲೂ ವಾತ್ಸಲ್ಯದ ಜೊತೆಗೆ, ಒಮ್ಮೆ ಕಾಮ ಇಣುಕಿದ್ದು ಅತ್ಯಂತ ಸಹಜ ಮತ್ತು ಸಮಾಜದ ದುಃಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಕಾದಂಬರಿ ವಾಸ್ತವ ಜಗತ್ತಿನ ಘಟನೆಗಳಿಗೆ ಬಹಳ ಹತ್ತಿರವಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ಹೆಣ್ಣು ಅಬಲೆಯಲ್ಲ ಎಂದು ಸಿಡಿದೆದ್ದು, ತಮ್ಮ ಜೀವನವನ್ನು ರೂಪಿಸಿಕೊಂಡ ಹಲವಾರು ನಿದರ್ಶನಗಳಿದ್ದರೂ ಅವು ಅಪರೂಪ ಎಂಬುದು ವಿಷಾದನೀಯ!

ಗುರುನಾಥ ಬೋರಗಿಯವರು ಸುಂದರವಾದ ಮುಖಪುಟದ ರೇಖಾಚಿತ್ರವನ್ನು ಮೂಡಿಸಿ, ಕಾದಂಬರಿಯ ಕಥಾವಸ್ತುವನ್ನು ಸೂಚ್ಯವಾಗಿ ತಿಳಿಸಿದ್ದಾರೆ. ಸೊರಬದ ನೇಕಾರ ಪ್ರಕಾಶನದಿಂದ ಹೊರ ಬಂದಿರುವ ಈ ಕಾದಂಬರಿಗೆ ನಾಡಿನ ಹೆಮ್ಮೆಯ ಕಾದಂಬರಿಕಾರರು, ಚಿತ್ರ ಸಾಹಿತಿಗಳೂ ಆದ ಡಾ. ಬಿ.ಎಲ್. ವೇಣು ಬೆನ್ನುಡಿ ಬರೆದಿರುವುದು ಕಾದಂಬರಿಕಾರ ಪಾಪು ಅವರಿಗೆ ಹೆಚ್ಚಿನ ಕೃತಿಗಳನ್ನು ಹೊರತರಲು ಪ್ರೋತ್ಸಾಹಕವಾಗಿದೆ. ಕಥೆಯ ಪಾತ್ರಧಾರಿಯೊಬ್ಬನ ಮುನ್ನುಡಿ ರೂಪದ ಸ್ವಗತ ವಿಷಯವಾಗಿದೆ. ಕಾದಂಬರಿಕಾರರ ಕ್ರಿಯಾಶೀಲತೆ ಮತ್ತು ಹೊಸ ವಿಚಾರವನ್ನು ವ್ಯಕ್ತಪಡಿಸಿದೆ.

ಹಡೆದವ್ವನಿಗೆ ಸಮರ್ಪಿಸಿರುವ ಪಾಪು ಗುರುವಿನ 'ಸೂಜಿ' ಕಾದಂಬರಿಗೆ ಓದುಗರ ಪ್ರೋತ್ಸಾಹ ಅಗತ್ಯ. ಕನ್ನಡ ಸಾರಸ್ವತ ಲೋಕಕ್ಕೆ ಇದೊಂದು ಉತ್ತಮ ಕೊಡುಗೆಯಾಗುತ್ತದೆ.



- ಜಸ್ಟಿನ್ ಡಿಸೌಜ,
ಸಿದ್ದಗಂಗಾ ವಿದ್ಯಾಸಂಸ್ಥೆ, ದಾವಣಗೆರೆ.

# ಅಯೋಡಿನ್ ಕೊರತೆಯಿಂದ ಮಕ್ಕಳ ವಿಕಾಸಕ್ಕೆ ಅಡ್ಡಿ



ವಯಸ್ಕರಿಗೆ 150 ಮೈಕ್ರೋಗ್ರಾಂ, ಗರ್ಭಿಣಿಯರಿಗೆ 200 ಮೈಕ್ರೋಗ್ರಾಂ, ಮಕ್ಕಳಿಗೆ 120 ಮೈಕ್ರೋಗ್ರಾಂ ನಷ್ಟು ಅಯೋಡಿನ್‌ಯುಕ್ತ ಉಪ್ಪು ಬಳಸಬೇಕು. ಇದನ್ನು ನಾವು ನಮ್ಮ ಮನೆಯಲ್ಲಿಯೇ ಪರೀಕ್ಷಿಸಬಹುದು. ಮನೆಯಲ್ಲಿರುವ ಉಪ್ಪಿನ ಮೇಲೆ ಅಕ್ಕಿಗಂಜಿ ಅಥವಾ ನಿಂಬೆರಸ ಹಾಕಿದರೆ ನೀಲಿ ಬಣ್ಣಕ್ಕೆ ತಿರುಗಿದರೆ ಅದರಲ್ಲಿ ಅಯೋಡಿನ್ ಅಂಶ ಇದೆ ಎಂದು ತಿಳಿಯಬೇಕು. ಇಲಾಖೆಯಿಂದಲೇ ಅಯೋಡಿನ್ ಕಿಟ್‌ನೀಡಿ ಪ್ರತಿ ಮನೆ ಮತ್ತು ಹಾಸ್ಟೆಲ್, ಅಂಗನವಾಡಿ ಕೇಂದ್ರಗಳಲ್ಲಿ ಇದನ್ನು ಪರೀಕ್ಷಿಸಲಾಗುತ್ತದೆ.

**– ಡಾ. ಎಲ್.ಡಿ. ವೆಂಕಟೇಶ್, ತಾಲ್ಲೂಕು ಆರೋಗ್ಯಾಧಿಕಾರಿಗಳು, ದಾವಣಗೆರೆ.**

ದಾವಣಗೆರೆ, ಡಿ.6- ಅಯೋಡಿನ್ ಒಂದು ಸೂಕ್ಷ್ಮ ಪೋಷಕಾಂಶವಾಗಿದ್ದು, ನಾವು ನಿತ್ಯ ಸೇವಿಸುವ ಆಹಾರದಲ್ಲಿ ಅತೀ ಮುಖ್ಯವಾಗಿ ದೇಹಕ್ಕೆ ಅವಶ್ಯಕವಾಗಿರುತ್ತದೆ. ಅಯೋಡಿನ್ ಕೊರತೆಯಿಂದ ಮಕ್ಕಳ ವಿಕಾಸಕ್ಕೆ ಅಡ್ಡಿಯಾಗುವು ದಲ್ಲದೆ, ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ಎಚ್ಚರಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ತಾಲ್ಲೂಕು ಆಡಳಿತದ ಸಹಯೋಗದಲ್ಲಿ ಸ್ಥಳೀಯ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಿನ್ನೆ ಏರ್ಪಡಿಸಲಾಗಿದ್ದ ವಿಶ್ವ ಅಯೋಡಿನ್ ಸಪ್ತಾಹ ಮತ್ತು ಕೋವಿಡ್-19 ಲಸಿಕೆ ಕುರಿತ ತಾಲ್ಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಭೆಯಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಅಯೋಡಿನ್ ಒಂದು ಸೂಕ್ಷ್ಮ ಪೋಷಕಾಂಶವಾಗಿದ್ದು, ನಾವು ನಿತ್ಯ ಸೇವಿಸುವ ಆಹಾರದಲ್ಲಿ ಅತೀ ಮುಖ್ಯವಾಗಿ ದೇಹಕ್ಕೆ ಬೇಕು. ಹಾಲು, ಸಮುದ್ರದ ಮೀನು, ಅಯೋಡಿನ್ ಇರುವಂತಹ ತರಕಾರಿಗಳನ್ನು ತಿನ್ನುವುದರಿಂದ ಈ ಪೋಷಕಾಂಶ ಪಡೆಯಬಹುದು. ಅಯೋಡಿನ್ ಕೊರತೆಯಾದರೆ ಮಹಿಳೆಯರಲ್ಲಿ ಪದೆ ಪದೇ ಗರ್ಭಪಾತವಾಗುತ್ತದೆ. ನಿಶಕ್ತಿ, ಬುದ್ಧಿ ಮಾಂಧ್ಯತೆ, ಕಿವುಡುತನ, ಮಂಕುತನದಿಂದ ಬಳಲುತ್ತಾರೆ. ಸಾಮಾನ್ಯವಾಗಿ ಅಯೋಡಿನ್ ಕೊರತೆಯಿಂದ ಉಂಟಾಗುವ ಸಮಸ್ಯೆಗಳು ಮಕ್ಕಳು, ವಯಸ್ಕರು, ಗರ್ಭಿಯರಿಗೆ ಬರುತ್ತದೆ. ಗಳಗಂಡ ರೋಗವು ಮನುಷ್ಯನಿಗೆ ಕುತ್ತಿಗೆ ಭಾಗದಲ್ಲಿ ಕಾಣಿಸಿಕೊಳ್ಳುತ್ತದೆ. ಅಯೋಡಿನ್‌ಯುಕ್ತ ಉಪ್ಪಿನಲ್ಲಿ 15 ರಿಂದ 30 ಪಿಪಿಎಂ ಪ್ರಮಾಣದಷ್ಟು ಅಯೋಡಿನ್ ಇರಬೇಕು ಎಂದವರು ತಿಳಿಸಿದರು.

ಕೋವಿಡ್-19 ಲಸಿಕೆ ಕಾರ್ಯಕ್ರಮವು ಪ್ರಥಮ ಹಂತದಲ್ಲಿ ಆರೋಗ್ಯ ಇಲಾಖೆಯ ಎಲ್ಲಾ ಸಿಬ್ಬಂದಿಯವರಿಗೆ ನೀಡಲಾಗುತ್ತದೆ. ನಂತರದಲ್ಲಿ ಸಾರ್ವಜನಿಕರಿಗೆ ಕೋವಿಡ್ ಲಸಿಕೆಯನ್ನು ಶೀತಲ ಸರಪಳಿಯಲ್ಲಿ ಶೇಖರಣೆ ಮಾಡಿ ಇಡಲಾಗುತ್ತದೆ. ಈಗಾಗಲೇ ತಾಲ್ಲೂಕು ಮತ್ತು ಜಿಲ್ಲೆಯ ಬೇಡಿಕೆಯನ್ನು ರಾಜ್ಯ ಮಟ್ಟಕ್ಕೆ ಕಳುಹಿಸಿಕೊಡ ಲಾಗಿದೆ. ಅದರಂತೆ ದಾವಣಗೆರೆ ತಾಲ್ಲೂಕಿನ ಸರ್ಕಾರಿ 2095, ಖಾಸಗಿ 2121 ಡೋಸ್ ಬೇಕಾಗುತ್ತದೆ. ಅದರಂತೆ ಖಾಸಗಿ ಮತ್ತು ಸರ್ಕಾರಿ ಕರ್ತವ್ಯ ನಿರ್ವಹಿಸುವ ಆರೋಗ್ಯ ಸಿಬ್ಬಂದಿಯವರಿಗೂ, ಅಂಗನವಾಡಿ ಕಾರ್ಯಕರ್ತರಿಗೂ, ಆಶಾ ಕಾರ್ಯಕರ್ತರಿಗೂ ಹಾಗೂ ಸಾರ್ವಜನಿಕರಿಗೂ ಕ್ರಮವಾಗಿ ನೀಡಲಾಗುತ್ತದೆ ಎಂದು ಅವರು ಹೇಳಿದರು.

ಇಂದಿನಿಂದ ಇದೇ ದಿನಾಂಕ 30ರ ವರೆಗೆ ಸಕ್ರಿಯ ಕ್ಷಯ ರೋಗ ಪತ್ತೆ ಹಚ್ಚುವ ಹಾಗೂ ಚಿಕಿತ್ಸೆ ಆಂದೋಲನಾ ಕಾರ್ಯಕ್ರಮ ನಡೆಯುತ್ತಿದ್ದು, 2025 ರೊಳಗೆ ನಾವು ಕ್ಷಯ ರೋಗವನ್ನು ನಿರ್ಮೂಲನೆ ಮಾಡುವ ಉದ್ದೇಶದಿಂದ ಪ್ರತಿಯೊಬ್ಬ ನಾಗರಿಕರನ್ನು ಪರೀಕ್ಷೆಗೆ ಒಳಪಡಿಸಲಾಗುತ್ತದೆ ಎಂದು ಡಾ. ವೆಂಕಟೇಶ್ ತಿಳಿಸಿದರು.

ತಹಶೀಲ್ದಾರ್ ಬಿ.ಎನ್. ಗಿರೀಶ್ ಮಾತನಾಡಿ, ಯಾವುದೇ ಕಾರಣಕ್ಕೂ ಬಂಡಿಗಳಲ್ಲಿ ಬರುವ, ಚೀಲದಲ್ಲಿ ಮಾರುವಂತಹ ಅಗ್ಗದ ಉಪ್ಪನ್ನು ಬಳಸಬಾರದು, ಅಯೋಡೈಸ್ಡ್ ಸಾಲ್ಟ್ ಎಂದು ನಮೂದಿಸಿದ ಸೂರ್ಯನ ಮಾರ್ಕ್ ಇರುವಂತಹ ಉಪ್ಪನ್ನು ಮತ್ತು ತರಕಾರಿಗಳನ್ನು ಅಂಗನವಾಡಿ ಕೇಂದ್ರ ಮತ್ತು ಹಾಸ್ಟೆಲ್‌ಗಳಲ್ಲಿ ಉಪಯೋಗಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಹೆಚ್. ಉಮಾಪತಿ, ಆಹಾರ ಇಲಾಖೆ ಉಪನಿರ್ದೇಶಕ ಪ್ರಕಾಶ್, ತಾಲ್ಲೂಕು ಹಿರಿಯ ಪುರುಷ ಆರೋಗ್ಯ ಸಹಾಯಕ ವೆಂಕಟಾಚಲ ಕುಮಾರ್, ಕ್ಷೇತ್ರ ಕಾರ್ಯಕ್ರಮ ವ್ಯವಸ್ಥಾಪಕ ಪಿ.ವಿ ರವಿ ಮತ್ತಿತರರು ಉಪಸ್ಥಿತರಿದ್ದರು.


SSIMS SPARSH CENTRE FOR ACCIDENTS BONE & JOINT CARE

ಸ್ಪರ್ಶ್ ಆಸ್ಪತ್ರೆ - ಬೆಂಗಳೂರು,
ಇಲ್ಲಿನ ಪ್ರಮುಖ ಮೂಳೆ ಹಾಗೂ ಕೀಲು ಶಸ್ತ್ರಚಿಕಿತ್ಸಕರು
ನಿಮ್ಮ ದಾವಣಗೆರೆಗೆ ಭೇಟಿ ನೀಡುತ್ತಾರೆ

ಡಾ. ರವಿಕುಮಾರ್ ಮುಕಾರ್ತಿಹಾಳ್
D'Ortho, DNB (Ortho), Fellowship in Arthroplasty (Depuy, SPARSH India), Fellowship in Septic & Aseptic Revision Joint Replacement surgery (EndoKlinik, Germany)
ಮೂಳೆ ಮತ್ತು ಕೀಲು ಮರುಜೋಡಣಾ ಶಸ್ತ್ರಚಿಕಿತ್ಸಕರು

ಡಾ. ನವೀನ್ ತಹಶೀಲ್ದಾರ್
MS(Ortho), AOA Fellow (Melbourne, Australia), Combined Neurosurgery & Orthopedic Spine Fellowship (Amrita Institute, Kochi)
ಬೆನ್ನುಹುರಿ ಶಸ್ತ್ರಚಿಕಿತ್ಸಕರು

ದಿನಾಂಕ: ಗುರುವಾರ, 10 ಡಿಸೆಂಬರ್ 2020 ಸಮಯ: ಬೆಳಿಗ್ಗೆ 11ರಿಂದ ಸಂಜೆ 5ರ ವರೆಗೆ

ಹೊರ ರೋಗಿಗಳ ಕ್ಲಿನಿಕ್ ವಿಳಾಸ: ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090

ಸ್ಪರ್ಶ್ ಆಸ್ಪತ್ರೆ ಎಲ್ಲಾ ಆರೋಗ್ಯ ವಿಮಾ(TPA) ಯೋಜನೆಯಡಿಯಲ್ಲಿ ಅಂಗೀಕೃತವಾಗಿದೆ


## ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಪ್ರೊ. ಲಿಂಗಣ್ಣ ಅವರಿಗೆ ಸನ್ಮಾನ



ದಾವಣಗೆರೆ,ಡಿ.6- ರಾಜ್ಯ ಸಫಾಯಿ ಕರ್ಮಚಾರಿ (ಲಿಡ್ಕರ್) ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷರಾಗಿ ನೇಮಕಗೊಂಡಿರುವ ಮಾಯಕೊಂಡ ಶಾಸಕ ಪ್ರೊ. ಲಿಂಗಣ್ಣ ಅವರನ್ನು ಶಾಮನೂರಿನ ಮಾದಿಗ ಸಮಾಜದ ಸುರೇಶ್ ದೊಡ್ಡಮನಿ, ದಾನಪ್ಪ ದೊಡ್ಡಮನಿ, ಮುದೋಳರ ಅಂಜಿನಪ್ಪ, ಕಡ್ಲೆಗೊಂದಿ ಬಸವರಾಜಪ್ಪ ಮತ್ತಿತರರು ಸನ್ಮಾನಿಸಿದರು.

## ನಾಳೆ ದಾವಣಗೆರೆ ಬಂದ್‌ಗೆ ಭಾರತ ಸಂಘರ್ಷ ಸಮನ್ವಯ ಸಮಿತಿ ನಿರ್ಧಾರ

ದಾವಣಗೆರೆ, ಡಿ.6- ಭಾರತ ಬಂದ್ ಪ್ರಯುಕ್ತ ಅಖಿಲ ಭಾರತ ಸಂಘರ್ಷ ಸಮನ್ವಯ ಸಮಿತಿ (ಎಐಕೆಎಸ್ ಸಿಸಿ) ಜಿಲ್ಲಾ ಸಮಿತಿ ವತಿಯಿಂದ ನಾಡಿದ್ದು ದಿನಾಂಕ 8ರ ಮಂಗಳವಾರ ದಾವಣಗೆರೆ ಬಂದ್ ಆಚರಿಸಲು ನಿರ್ಧರಿಸಲಾಗಿದೆ.

ಕೇಂದ್ರ ಸರ್ಕಾರದ ಭೂ ಸುಧಾರಣೆ ಕಾಯ್ದೆ ತಿದ್ದುಪಡಿ, ಎಪಿಎಂಸಿ ಕಾಯ್ದೆ ತಿದ್ದುಪಡಿ, ಬೀಜ ಗೊಬ್ಬರ, ವಿದ್ಯುತ್ ಕಾಯ್ದೆ, ದೇಶ ಮಾರಾಟ ಮಾಡಲು ಅವಕಾಶ ಕೊಟ್ಟು ರೈತ ವರ್ಗಕ್ಕೆ ಮಾರಕ ಕಾನೂನು ಜಾರಿಗೊಳಿಸುವುದನ್ನು ವಿರೋಧಿಸಿ ಸಮಿತಿಯಿಂದ ನಾಳೆ ದಿನಾಂಕ 7ರ ಸೋಮವಾರ 11 ಗಂಟೆಗೆ ರೈತ ಮುಖಂಡರು ಪ್ರಮುಖ ಬೀದಿಗಳಲ್ಲಿ ಬೈಕ್ ರ್‍ಯಾಲಿ ನಡೆಸಿ ಸಾರ್ವಜನಿಕರಿಗೆ ದಾವಣಗೆರೆ ಬಂದ್ ಕಾರ್ಯಕ್ರಮದ ಬಗ್ಗೆ ಮನವಿ ಮಾಡುವ ಬಗ್ಗೆ ಅಶೋಕ ರಸ್ತೆಯಲ್ಲಿನ ಸಿಪಿಐ ಕಚೇರಿಯಲ್ಲಿ ಇಂದು ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

8ರ ಮಂಗಳವಾರ ಬೆಳಿಗ್ಗೆ 6 ಗಂಟೆಗೆ ಜಯದೇವ ವೃತ್ತದ ಬಳಿ ರೈತ ಸಂಘಟನೆಯ ಮುಖಂಡರು ಸೇರುವರು. ಜೆಸಿಟಿಯು ವಿದ್ಯಾರ್ಥಿ ಯುವಜನರು, ಎಲ್ಲಾ ರೈತ ಸಂಘಟನೆಗಳು ಹೆಚ್ಚಿನದಾಗಿ ಭಾಗವಹಿಸಿ ದಾವಣಗೆರೆ ಬಂದ್ ಯಶಸ್ವಿಗೊಳಿಸಬೇಕೆಂದು ಸಮಿತಿಯ ಜಿಲ್ಲಾ ಸಂಚಾಲಕ ಐರಣಿ ಚಂದ್ರು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಹೊನ್ನೂರು ಮುನಿಯಪ್ಪ, ರವಿಕುಮಾರ್ ಬಲ್ಲೂರು, ಶೇಖರನಾಯ್ಕ, ಈ. ಶ್ರೀನಿವಾಸ್, ತಿಪ್ಪೇಶ್ ಅಣಬೇರು, ಮಲ್ಲಶೆಟ್ಟಿ ಚನ್ನಬಸಪ್ಪ, ಬಸವರಾಜ ಹುಚ್ಚವ್ವನಹಳ್ಳಿ, ಹುಚ್ಚವ್ವನಹಳ್ಳಿ ಮಂಜುನಾಥ್, ಜಬೀನಾ ಖಾನಂ, ತೇಜಸ್ವಿ ಪಟೇಲ್, ರಂಗನಾಥ, ಪ್ರಸನ್ನ ಕುಮಾರ್ ಪಾಲವನಹಳ್ಳಿ, ಸತೀಶ್ ಅರವಿಂದ್, ಕರಿಬಸಪ್ಪ ಇದ್ದರು.





ಹೃದಯಪೂರ್ವಕ ಶುಭಾಶಯಗಳು

ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಆಡಳಿತ ಮಂಡಳಿಗೆ ವಿಶೇಷ ಆಹ್ವಾನಿತರನ್ನಾಗಿ ಶ್ರೀಮತಿ ಉಮಾ ವಾಗೀಶ್ ಎಸ್. ಇವರನ್ನು ನೇಮಕ ಮಾಡಿ, ಬ್ಯಾಂಕಿನ ಸೇವೆ ಮಾಡಲು ಅವಕಾಶ ಮಾಡಿಕೊಟ್ಟ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಎನ್.ಎ. ಮುರುಗೇಶ್ ಅವರಿಗೆ ನಮ್ಮ ಕುಟುಂಬ ಹಾಗೂ ಬಂಧುಗಳ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳು ಮತ್ತು ಬ್ಯಾಂಕ್ ಆಡಳಿತ ಮಂಡಳಿಗೆ ವಿಶೇಷ ಆಹ್ವಾನಿತರಾಗಿ ನೇಮಕಗೊಂಡಿರುವ ಶ್ರೀಮತಿ ಉಮಾ ವಾಗೀಶ್ ಎಸ್. ಅವರಿಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.



ಎಂ. ಬನ್ನಯ್ಯಸ್ವಾಮಿ
ವ್ಯವಸ್ಥಾಪಕರು, ಶ್ರೀ ಶೈಲ ಮಠ, ದಾವಣಗೆರೆ.

✦ ಶ್ರೀಮತಿ ಗೀತಾ, ಶ್ರೀ ಮಲ್ಲಿಕಾರ್ಜುನಯ್ಯ
✦ ಶ್ರೀಮತಿ ಪ್ರೀತಿ, ಶ್ರೀ ಭರತ್, ಚಿ|| ಭರಣಿಪ್ರಿಯ
✦ ಶ್ರೀಮತಿ ಭಾವನ, ಶ್ರೀ ಪವನ್, ಚಿ|| ಓಜಸ್ವಿ, ಚಿ|| ನಮಿತ್
✦ ಶ್ರೀಮತಿ ನಂದಿನಿ, ಶ್ರೀ ರೇಣುಕಾಪ್ರಸಾದ್, ಚಿ|| ರುಷಿಲ್
✦ ಶ್ರೀಮತಿ ಹೊನ್ನಮ್ಮ, ಶ್ರೀ ರುದ್ರೇಶ್, ಚಿ|| ಕೀರ್ತನಾ
✦ ಶ್ರೀಮತಿ ರೇಖಾ, ಶ್ರೀ ಸುರೇಶ್, ಚಿ|| ದರ್ಶನ್, ಚಿ|| ದವನ
✦ ಶ್ರೀ ರುದ್ರಯ್ಯ
✦ ಶ್ರೀಮತಿ ಭಾಗ್ಯ, ಶ್ರೀ ಬಸವರಾಜಯ್ಯ, ಚಿ|| ದೀಪ್ತಿ, ಚಿ|| ಯುವರಾಜ್, ಚಿ|| ವಿನಯ್
✦ ಶ್ರೀಮತಿ ಮೀನಾಕ್ಷಿ, ಶ್ರೀ ಮುರುಗೇಶ್, ಚಿ|| ಗಗನ, ಚಿ|| ಭುವನ
✦ ಶ್ರೀಮತಿ ಸುಜಾತ, ಶ್ರೀ ಬಸವರಾಜಯ್ಯ, ಕು|| ರಚನಾ
✦ ಶ್ರೀಮತಿ ಶಾರದಾ, ಶ್ರೀ ರವೀಂದ್ರಯ್ಯ, ಚಿ|| ಪ್ರಜ್ವಲ್


## 14ರಂದು ಶ್ರೀ ದಾನಮ್ಮ ದೇವಿ ಜಾತ್ರೋತ್ಸವ



ದಾವಣಗೆರೆ,ಡಿ.6- ಸ್ಥಳೀಯ ಹಳೇಪೇಟೆ - ದೊಡ್ಡಪೇಟೆಯಲ್ಲಿರುವ ಶ್ರೀ ಬಸವೇಶ್ವರ ಮತ್ತು ಶ್ರೀ ದಾನಮ್ಮ ದೇವಿ ದೇವಸ್ಥಾನದಲ್ಲಿ ಇದೇ ದಿನಾಂಕ 14ರ ಸೋಮವಾರ ಶ್ರೀ ದಾನಮ್ಮ ದೇವಿಯ ಜಾತ್ರೋತ್ಸವವನ್ನು ಸರಳವಾಗಿ ಆಚರಿಸಲಾಗುತ್ತದೆ.

ಈ ವರ್ಷ ದಂಡಿ - ಉಡಿ ತುಂಬುವ ಕಾರ್ಯಕ್ರಮವು ಇರುವುದಿಲ್ಲ. ಜಾತ್ರೋತ್ಸವದಂದು ಶ್ರೀ ದಾನಮ್ಮ ದೇವಿಯ ಆಶೀರ್ವಾದದಿಂದ ಕಂಕಣ ಮಾತ್ರ ಭಕ್ತರಿಗೆ ಮಾತ್ರ ಕೊಡಲಾಗುವುದು ಎಂದು ಶ್ರೀ ಬಸವೇಶ್ವರ ಸೇವಾ ಸಂಘ ತಿಳಿಸಿದೆ.

ಕೊರೊನಾ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದ್ದು, ಭಕ್ತಾದಿಗಳು ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸಿದವರಿಗೆ ಮಾತ್ರ ದೇವಸ್ಥಾನದ ಒಳಗೆ ಪ್ರವೇಶ ನೀಡಲಾಗುವುದು ಎಂದು ಸಂಘದ ಪದಾಧಿಕಾರಿಗಳು ಹೇಳಿದ್ದಾರೆ.

## ಪೆಟ್ರೋಲ್, ಡೀಸೆಲ್ ಬೆಲೆ ಎರಡು ವರ್ಷದಲ್ಲೇ ಅತಿ ಹೆಚ್ಚು

ನವದೆಹಲಿ, ಡಿ. 6 - ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಗಳು ಹೆಚ್ಚಳವಾಗುತ್ತಿರುವ ಹಿನ್ನೆಲೆಯಲ್ಲಿ ಸತತ ಐದನೇ ದಿನ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳು ಏರಿಕೆಯಾಗಿದ್ದು, ಎರಡು ವರ್ಷಗಳಲ್ಲೇ ಅತಿ ಹೆಚ್ಚಿನ ಮಟ್ಟಕ್ಕೆ ತಲುಪಿವೆ.


ದೆಹಲಿಯಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 28 ಪೈಸೆ ಹೆಚ್ಚಾಗಿದ್ದು 83.41 ರೂ.ಗಳಿಗೆ ತಲುಪಿದೆ. ಡೀಸೆಲ್ ಬೆಲೆ 29 ಪೈಸೆ ಹೆಚ್ಚಾಗಿದ್ದು 73.61 ರೂ.ಗಳಿಗೆ ತಲುಪಿದೆ.

ಮುಂಬೈನಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 90 ರೂ.ಗಳ ಗಡಿ ದಾಟಿದೆ. ಡೀಸೆಲ್ ಬೆಲೆ 80 ರೂ.ಗಳ ಗಡಿ ದಾಟಿದೆ.

ಸತತ ಐದು ದಿನಗಳಿಂದ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಾಗುತ್ತಿದೆ. ನವೆಂಬರ್ 20ರ ನಂತರ ಒಟ್ಟು 14 ಬಾರಿ ತೈಲ ಬೆಲೆ ಹೆಚ್ಚಾಗಿದೆ. ಎರಡು ತಿಂಗಳ ನಂತರ ಪೆಟ್ರೋಲಿಯಂ ಕಂಪನಿಗಳು ತೈಲ ಬೆಲೆ ಪರಿಷ್ಕರಣೆ ಆರಂಭಿಸಿದ್ದವು. ಸೆಪ್ಟೆಂಬರ್ 2018ರ ನಂತರ ಇದೇ ಮೊದಲ ಬಾರಿಗೆ ತೈಲ ಬೆಲೆ ಈ ಹಂತ ತಲುಪಿದೆ.

ಕಳೆದ 17 ದಿನಗಳಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 2.35 ರೂ. ಹಾಗೂ ಡೀಸೆಲ್ ಬೆಲೆ 3.15 ರೂ.ಗಳಷ್ಟು ಹೆಚ್ಚಾಗಿದೆ.

ಕೊರೊನಾ ವೈರಸ್‌ಗೆ ಲಸಿಕೆ ದೊರೆತಿರುವ ಹಿನ್ನೆಲೆಯಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗುವ ನಿರೀಕ್ಷೆ ಹೆಚ್ಚಾಗಿದ್ದು, ಇದು ಕಚ್ಚಾ ತೈಲದ ಬೆಲೆ ಏರಲು ಕಾರಣವಾಗಿದೆ. ಅಕ್ಟೋಬರ್ 30ರ ನಂತರ ಅಂತರರಾಷ್ಟ್ರೀಯ ಮಾರುಕಟ್ಟೆ ಯಲ್ಲಿ ಕಚ್ಚಾ ತೈಲದ ಬೆಲೆ ಶೇ.34ರಷ್ಟು ಹೆಚ್ಚಾಗಿದೆ. ಡಿಸೆಂಬರ್ 4ರಂದು ಕಚ್ಚಾ ತೈಲದ ಬೆಲೆ ಬ್ಯಾರಲ್‌ಗೆ 49.5 ಡಾಲರ್ ಆಗಿತ್ತು.



"ಮನೆಯ ಬಾಗಿಲಿಗೆ ಮಹಾನಗರ ಪಾಲಿಕೆ"



ದಾವಣಗೆರೆ ನಗರದ ಜನತೆಗಾಗಿ ಮಹಾನಗರ ಪಾಲಿಕೆಯ ಸೇವೆಗಳು ಮತ್ತು ಸೌಲಭ್ಯಗಳನ್ನು ಮನೆ ಬಾಗಿಲಿಗೆ ನೀಡುವ ಕಾರ್ಯಕ್ರಮವನ್ನು ಪೂಜ್ಯ ಮಹಾಪೌರರಾದ **ಶ್ರೀ ಬಿ.ಜಿ. ಅಜಯ್ ಕುಮಾರ್** ಅವರ ನೇತೃತ್ವದಲ್ಲಿ ಹಮ್ಮಿಕೊಂಡಿದ್ದು ಇದರ ಸದುಪಯೋಗವನ್ನು 9ನೇ ವಾರ್ಡ್ ಮತ್ತು 12ನೇ ವಾರ್ಡಿನ ಸಮಸ್ತ ನಾಗರಿಕರು ಪಡೆದುಕೊಳ್ಳಬೇಕೆಂದು ವಿನಂತಿಸುತ್ತೇವೆ.

ದಿನಾಂಕ : 07-12-2020 ಸಮಯ : ಬೆಳಗ್ಗೆ 10 ರಿಂದ 5 ಗಂಟೆಯವರೆಗೆ
ಸ್ಥಳ : ಹಳೇ ಮಿಲ್ಲತ್ ಶಾಲೆಯ ಆವರಣ, ಮಾಗಾನಹಳ್ಳಿ ರೋಡ್, ದಾವಣಗೆರೆ.


ಶ್ರೀ ಜಾಕೀರ್ ಅಲಿ,
ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ
9 ನೇ ವಾರ್ಡ್,



ಶ್ರೀಮತಿ ಉರ್‌ಬಾನು ಪಂಡಿತ್,
ಸದಸ್ಯರು, ಮಹಾನಗರ ಪಾಲಿಕೆ, ದಾವಣಗೆರೆ
12 ನೇ ವಾರ್ಡ್,


## 2,500 ನ್ಯಾಯಾಲಯಗಳಲ್ಲಿ ವಿಡಿಯೋ ಕಾನ್ಫರೆನ್ಸ್ ಕ್ಯಾಬಿನ್

ನವದೆಹಲಿ ಡಿ. 6 - ಕೆಳ ನ್ಯಾಯಾಲಯಗಳು ಆನ್‌ಲೈನ್ ಮೂಲಕ ವಿಚಾರಣೆ ನಡೆಸುವ ಸಾಮರ್ಥ್ಯವನ್ನು ಹೆಚ್ಚಿಸಲು 2,506 ನ್ಯಾಯಾಲಯ ಸಂಕೀರ್ಣಗಳಲ್ಲಿ ವಿಡಿಯೋ ಕಾನ್ಫರೆನ್ಸ್ ಕ್ಯಾಬಿನ್‌ಗಳನ್ನು ಸ್ಥಾಪಿಸಲು ಕೇಂದ್ರ ಕಾನೂನು ಇಲಾಖೆ ಅನುದಾನ ಬಿಡುಗಡೆ ಮಾಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ವಿಡಿಯೋ ಕಾನ್ಫರೆನ್ಸ್ ಕ್ಯಾಬಿನ್‌ಗಳಿಗಾಗಿ 5.21 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿತ್ತು. ಅಕ್ಟೋಬರ್‌ನಲ್ಲಿ ಹೆಚ್ಚುವರಿ ವಿಡಿಯೋ ಕಾನ್ಫರೆನ್ಸ್ ಉಪಕರಣಗಳ ಖರೀದಿಗೆ 28.88 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ಇ- ಸಮಿತಿ ಹಾಗೂ ಕಾನೂನು ಇಲಾಖೆಗಳ ಮೂಲಕ ಈ ಹಣ ಬಿಡುಗಡೆ ಮಾಡಲಾಗಿದೆ. ದೇಶದಲ್ಲಿ 3,288 ನ್ಯಾಯಾಲಯ ಸಂಕೀರ್ಣಗಳಿವೆ. ಇವುಗಳ ಪೈಕಿ 2,506 ನ್ಯಾಯಾಲಯ ಸಂಕೀರ್ಣಗಳು ವಿಡಿಯೋ ಕಾನ್ಫರೆನ್ಸ್ ಕ್ಯಾಬಿನ್ ಹೊಂದಲು ಅನುದಾನ ಬಿಡುಗಡೆ ಮಾಡಲಾಗಿದೆ.

ದೊಡ್ಡ ನ್ಯಾಯಾಲಯ ಸಂಕೀರ್ಣಗಳಿಗೆ ಹಲವು ಕ್ಯಾಬಿನ್‌ಗಳನ್ನು ಕಲ್ಪಿಸಲಾಗುವುದು. ಕೊರೊನಾ ಹಿನ್ನೆಲೆಯಲ್ಲಿ ನ್ಯಾಯಾಲಯಗಳು ಆನ್‌ಲೈನ್ ಮೂಲಕ ವಿಚಾರಣೆ ನಡೆಸುವುದನ್ನು ಮುಂದುವರೆಸಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗಿದೆ.



**ಹಂಪ್ಸ್ ತೆರವು ಮಾಡಿ**

ಹರಪನಹಳ್ಳಿ ತಾಲ್ಲೂಕಿನ ಅಳಿಗಂಚಿಕೆರೆ-ಬೆಂಡಿಗೆರೆ ಕ್ರಾಸ್‌ನಲ್ಲಿರುವ ಬೃಹದಾಕಾರದ ಹಂಪ್ಸ್ ತೆರವುಗೊಳಿಸಲು ಗ್ರಾಮಸ್ಥರು ಆಗ್ರಹಿಸಿದ್ದಾರೆ.


|| ಶ್ರೀ ಕೊಟ್ಟೂರೇಶ್ವರ ಪ್ರಸನ್ನ ||
ಆರನೇ ವರ್ಷದ ಪುಣ್ಯಸ್ಮರಣೆ



ಜಿ. ಶಿವಪ್ರಕಾಶ್‌ರವರು
ನಿವೃತ್ತ ಸಹಾಯಕ ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ದಾವಣಗೆರೆ.

ಕರುಣಾಮಯಿ, ಸ್ನೇಹ ಜೀವಿ, ಸಹೃದಯಿ ಹಾಗೂ ನಮ್ಮೆಲ್ಲರ ಹಿತ ಚಿಂತಕರಾಗಿದ್ದ ನೀವುಗಳು ನಮ್ಮನ್ನಗಲಿ ಇಂದಿಗೆ ಆರು ವರ್ಷಗಳು ಕಳೆದವು. ದೈಹಿಕವಾಗಿ ನೀವು ನಮ್ಮ ಬಳಿ ಇಲ್ಲದಿದ್ದರೂ, ನಮ್ಮೆಲ್ಲರ ಹೃದಯದಲ್ಲಿ ಶಾಶ್ವತವಾಗಿ ನೆಲೆಸಿರುತ್ತೀರಿ. ಸದಾ ನಿಮ್ಮ ಸ್ಮರಣೆಯಲ್ಲಿ ಹಾಗೂ ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ...

✦ ಪತ್ನಿ : ಶ್ರೀಮತಿ ಎಂ.ಸುಜಾತ ಶಿವಪ್ರಕಾಶ್
✦ ಮಕ್ಕಳು : ಎಸ್. ಪ್ರವೀಣ್‌ಕುಮಾರ್, ಪೊಲೀಸ್ ಇಲಾಖೆ
✦ ಎಸ್. ಸುನೀಲ್‌ಕುಮಾರ್, ಎಸ್. ವಿನಯ್ ಕುಮಾರ್, KMF
✦ ಸೊಸೆಯಂದಿರು : ಕವಿತ, ವೇದ ✦ ಮಗಳು : ಪೂಜಾ ಮಲ್ಲೇಶ್
✦ ಅಳಿಯ : ಮಲ್ಲೇಶ್. ಹೆಚ್. ಬಾಗಳಿ, ಪೊಲೀಸ್ ಇಲಾಖೆ
✦ ಮೊಮ್ಮಕ್ಕಳು : ಶ್ರೇಯಸ್, ಸಾನ್ವಿ, ಶುಭಾ
✦ ಪುಟಾಣಿಗಳಾದ : ನಂದಿನಿ, ನಂದಿತ (ಟ್ವಿಂಟು)

ದಾವಣಗೆರೆ ಜಿಲ್ಲಾ ಪೊಲೀಸ್ ಸಿಬ್ಬಂದಿ ಅಭಿಮಾನಿ ಬಳಗದವರು ಹಾಗೂ ಬಂಧು-ಮಿತ್ರರು, ದಾವಣಗೆರೆ.


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte